24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA । EDITOR : K.R. RENU । RNI No. DELKAN/2003/10363 । ಪುಟ 8 । ಸಂಪುಟ 24 । ಸಂಚಿಕೆ 133 । ನವದೆಹಲಿ । ಬೆಲೆ ₹10। ನವಂಬರ್ 10, 2026, ಮಂಗಳವಾರ

RAJIV GANDHI UNIVERSITY OF HEALTH SCIENCES, KARNATAKA

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ

No. 12, 30th Cross Road, 4th 'T' Block, Jayanagar, Bengaluru 560 041, Karnataka.









ದೇಶದ ಹಾಗೂ
ಕರ್ನಾಟಕ ರಾಜ್ಯದ ಜನತೆಗೆ

ದೀಪಾವಳಿ
ಹಬ್ಬದ ಹಾರ್ದಿಕ
ಶುಭಾಶಯಗಳು



ಶುಭಕೋರುವವರು

ಉಪಕುಲಪತಿಗಳು

ಡಾ. ಭಗವಾನ್ ಬಿ. ಸಿ.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ
ವಿಶ್ವವಿದ್ಯಾಲಯ, ಕರ್ನಾಟಕ



24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

ದೆಹಲಿ ವಾರ್ತೆ

ನವೆಂಬರ್ 10, 2026, ಮಂಗಳವಾರ

ಒಳಪುಟಗಳಲ್ಲಿ

ರಾಜ್ಯಮಟ್ಟದ 161ನೇ ಏಕಗವಾಕ್ಷಿ ಅನುಮೋದನಾ ಸಮಿತಿಯಿಂದ 147 ಯೋಜನೆಗಳಿಗೆ ಒಪ್ಪಿಗೆ- ಪು.4

ಬನ್ನೇರುಘಟ್ಟ ಉದ್ಯಾನವನದಲ್ಲಿ ಪ್ರವಾಸಿಗರ ಸ್ನೇಹಿ ಅಭಿವೃದ್ಧಿ ಕಾಮಗಾರಿ- 38 ಕೋಟಿ ವೆಚ್ಚದ ಯೋಜನೆಗೆ ಸಚಿವ ರಾಮಲಿಂಗಾರೆಡ್ಡಿ ಚಾಲನೆ - ಪು.5



ಕರುನಾಡಿನೆಲ್ಲೆಡೆ ಸಂಭ್ರಮದ ದೀಪಾವಳಿ ಕಂಡುಬಂದ ದೃಶ್ಯ

ದೀಪಾವಳಿ ಬಳಿಕ ದೆಹಲಿ–ಎನ್‌ಸಿಆರ್‌ನಲ್ಲಿ ವಾಯುಮಾಲಿನ್ಯ ಏರಿಕೆ

20 ಕೇಂದ್ರಗಳಲ್ಲಿ ಅಪಾಯಕಾರಿಮಟ್ಟ ತಲುಪಿದ ಗಾಳಿಯ ಗುಣಮಟ್ಟ, ಮಾಲಿನ್ಯದ ಪ್ರಮಾಣ ಬರೋಬ್ಬರಿ ಶೇ.60ರಷ್ಟು ಹೆಚ್ಚಳ



ನವದೆಹಲಿ, ನ.9: ದೀಪಾವಳಿ ಹಬ್ಬದ ಸಂಭ್ರಮದ ಬೆನ್ನಲ್ಲೇ ದೇಶದ ರಾಜಧಾನಿ ನವದೆಹಲಿಯಲ್ಲಿ ವಾಯುಮಾಲಿನ್ಯದ ಮಟ್ಟವು ಅಪಾಯಕಾರಿ ಮೀರಿ ದಾಖಲಾಗಿದ್ದು, ದಟ್ಟವಾದ ಹೊಗೆಯಿಂದಾಗಿ ಜನರು ಉಸಿರಾಡಲೂ ಪರದಾಡುವಂತಹ ಉಸಿರುಕಟ್ಟಿಸುವ ಪರಿಸ್ಥಿತಿ ನಿರ್ಮಾಣವಾಗಿದೆ.

ಹಬ್ಬದ ರಾತ್ರಿ ಸಿಡಿಸಿದ ಪಟಾಕಿಗಳ ಪರಿಣಾಮವಾಗಿ ಸೋಮವಾರ ಬೆಳಗಿನ ಜಾವದಲ್ಲಿ ಗಾಳಿಯ ಗುಣಮಟ್ಟವು ತೀವ್ರವಾಗಿ ಕುಸಿದಿದ್ದು, ಕಳೆದ ವರ್ಷದ ದೀಪಾವಳಿಗೆ ಹೋಲಿಸಿದರೆ ಈ ಬಾರಿ ಮಾಲಿನ್ಯದ ಪ್ರಮಾಣ ಶೇ.69 ರಷ್ಟು ಹೆಚ್ಚಳವಾಗಿದೆ. ಕಳೆದ ಒಂಬತ್ತು ವರ್ಷಗಳ ಪೈಕಿ ಎಂಟು ವರ್ಷಗಳಲ್ಲಿ ದೀಪಾವಳಿಯ ಮರುದಿನವೇ ಅತಿಹೆಚ್ಚು ವಾಯು ಗುಣಮಟ್ಟ ಹದಗೆಟ್ಟಿರುವುದು ಅಧ್ಯಯನದಲ್ಲಿ ಬಹಿರಂಗವಾಗಿದೆ.

ನ.ರಂದು ದೀಪಾವಳಿ ರಾತ್ರಿ ದೆಹಲಿಯ 59 ವಾಯು ಗುಣಮಟ್ಟ ಮೇಲ್ವಿಚಾರಣಾ ಕೇಂದ್ರಗಳ ಪೈಕಿ 20 ಕೇಂದ್ರಗಳಲ್ಲಿ ವಾಯು ಗುಣಮಟ್ಟ ಸೂಚ್ಯಂಕ (ಎಕ್ಯೂಐ) 400ರ ಗಡಿ ದಾಟಿ ತೀವ್ರ ಮಾಲಿನ್ಯದ ಮಟ್ಟ ತಲುಪಿದೆ. ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ (ಸಿಪಿಸಿಬಿ) ನೈಜ ಸಮಯದ ಅಂಕಿಅಂಶಗಳ ಪ್ರಕಾರ, ರಾತ್ರಿ 9 ಗಂಟೆಗೆ ದೆಹಲಿಯ ಒಟ್ಟಾರೆ ಎಕ್ಯೂಐ 370ರಷ್ಟಿತ್ತು. ರಾತ್ರಿ 11 ಗಂಟೆಗೆ ಇದು 373ಕ್ಕೆ ಏರಿಕೆಯಾಗಿತ್ತು.

ಸೋನಿಯಾ ವಿಹಾರ್‌ನಲ್ಲಿ ಅತ್ಯಧಿಕ 463 ಹಾಗೂ ಜಹಾಂಗೀರ್‌ಪುರಿಯಲ್ಲಿ 450 ಎಕ್ಯೂಐ ದಾಖಲಾಗಿದೆ. 33 ಕೇಂದ್ರಗಳಲ್ಲಿ ಅತ್ಯಂತ ಕಳಪೆ ಹಾಗೂ ಆರು ಕೇಂದ್ರಗಳಲ್ಲಿ ಕಳಪೆ ವಾಯು ಗುಣಮಟ್ಟ ದಾಖಲಾಗಿದೆ. ನವೆಂಬರ್ 9ರ ಮುಂಜಾನೆ 3 ಗಂಟೆ ವೇಳೆಯೂ ಎಕ್ಯೂಐ 367ರಷ್ಟಿತ್ತು. ದೆಹಲಿ ಮಾತ್ರವಲ್ಲದೆ ನೆರೆಯ ನಗರಗಳಲ್ಲೂ ಮಾಲಿನ್ಯ ಹೆಚ್ಚಾಗಿದೆ.

ದೀಪಾವಳಿ ರಾತ್ರಿ 9ರಿಂದ 11 ಗಂಟೆಯ ಅವಧಿಯಲ್ಲಿ ಗಾಜಿಯಾಬಾದ್‌ನಲ್ಲಿ ಎಕ್ಯೂಐ 353ರಿಂದ 360ಕ್ಕೆ, ನೋಯ್ಡಾದಲ್ಲಿ 312ರಿಂದ 319ಕ್ಕೆ ಹಾಗೂ ಗುರುಗ್ರಾಮದಲ್ಲಿ 276ರಿಂದ 280ಕ್ಕೆ ಏರಿಕೆಯಾಗಿದೆ. ಗ್ರೇಟರ್ ನೋಯ್ಡಾದಲ್ಲಿ 299ರಿಂದ 301ಕ್ಕೆ ಏರಿಕೆಯಾಗಿದೆ.

9 ವರ್ಷಗಳ ಅಂಕಿಅಂಶಗಳಲ್ಲಿ ಆತಂಕಕಾರಿ ಬೆಳವಣಿಗೆ

2017ರಿಂದ 2025ರವರೆಗಿನ ದೆಹಲಿ, ಗಾಜಿಯಾಬಾದ್, ನೋಯ್ಡಾ, ಗ್ರೇಟರ್ ನೋಯ್ಡಾ, ಗುರುಗ್ರಾಮ ಮತ್ತು ಫರಿದಾಬಾದ್ ನಗರಗಳ ವಾಯು ಗುಣಮಟ್ಟದ ಅಂಕಿಅಂಶಗಳನ್ನು ವಿಶ್ಲೇಷಿಸಲಾಗಿದೆ. ಈ ಒಂಬತ್ತು ವರ್ಷಗಳಲ್ಲಿ ಎಂಟು ವರ್ಷ ದೀಪಾವಳಿಯ ಮರುದಿನ ಸರಾಸರಿ ಎಕ್ಯೂಐ ಹೆಚ್ಚಾಗಿದೆ. 2022ರಲ್ಲಿ ಮಾತ್ರ ಮಾಲಿನ್ಯ ಪ್ರಮಾಣದಲ್ಲಿ ಇಳಿಕೆ ಕಂಡುಬಂದಿತ್ತು.

2018ರಲ್ಲಿ ಆರು ನಗರಗಳ ಸರಾಸರಿ ಎಕ್ಯೂಐ ದೀಪಾವಳಿಯ ದಿನ 269ರಷ್ಟಿದ್ದು, ಮರುದಿನ 416ಕ್ಕೆ ಏರಿಕೆಯಾಗಿತ್ತು. 2021ರಲ್ಲಿ 387ರಿಂದ 469ಕ್ಕೆ ಹೆಚ್ಚಳವಾಗಿತ್ತು. 2023ರಲ್ಲಿ ಸುಮಾರು ಶೇ.88ರಷ್ಟು ಏರಿಕೆ ದಾಖಲಾಗಿತ್ತು.

ದೆಹಲಿಯಲ್ಲಿ ವಿಷಗಾಳಿ: 1331ಕ್ಕೆ ತಲುಪಿದ ಎಕ್ಯೂಐ

ರಿಯಲ್ ಟೈಮ್ ಮಾಹಿತಿ ನೀಡುವ AQI.in ಅಂಕಿ–ಅಂಶಗಳ ಪ್ರಕಾರ, ನವೆಂಬರ್ 9 ರಂದು ಬೆಳಗ್ಗೆ 8:01 ಕ್ಕೆ ದೆಹಲಿಯ ವಾಯು ಗುಣಮಟ್ಟ ಸೂಚ್ಯಂಕ (AQI) 663 ರಷ್ಟಿತ್ತು. ಆದರೆ, ಭಾನುವಾರ ಮಧ್ಯರಾತ್ರಿ 1:31 ರ ಸುಮಾರಿಗೆ ಈ ಸೂಚ್ಯಂಕವು ಗರಿಷ್ಠ 1,331 ರಷ್ಟನ್ನು ಮುಟ್ಟಿತ್ತು. ಹಬ್ಬದ ರಾತ್ರಿ ಸಿಡಿಸಿದ ಪಟಾಕಿಗಳ ಪರಿಣಾಮವಾಗಿ ಸೋಮವಾರ ಬೆಳಗಿನಜಾವದಲ್ಲಿ ಗಾಳಿಯ ಗುಣಮಟ್ಟವು ತೀವ್ರವಾಗಿ ಕುಸಿದಿದ್ದು, ಕಳೆದ ವರ್ಷದ ದೀಪಾವಳಿಗೆ ಹೋಲಿಸಿದರೆ ಈ ಬಾರಿ ಮಾಲಿನ್ಯದ ಪ್ರಮಾಣ ಬರೋಬ್ಬರಿ ಶೇಕಡಾ 69 ರಷ್ಟು ಹೆಚ್ಚಳವಾಗಿದೆ.

ನಿಯಂತ್ರಣ ಕ್ರಮಗಳ ನಡುವೆಯೂ ಮಾಲಿನ್ಯ

ಪಟಾಕಿಗಳ ಮಾರಾಟ ಮತ್ತು ಬಳಕೆಯ ನಿಯಂತ್ರಣಕ್ಕೆ ಹಲವು ಬಾರಿ ನಿರ್ಬಂಧಗಳನ್ನು ಹೇರಿದರೂ ಮಾಲಿನ್ಯ ನಿಯಂತ್ರಣಕ್ಕೆ ಬಂದಿಲ್ಲ. ಪಟಾಕಿಗಳಷ್ಟೇ ಅಲ್ಲದೆ ವಾಹನಗಳ ಹೊಗೆ, ನೆರೆಯ ರಾಜ್ಯಗಳಲ್ಲಿ ಕೃಷಿ ತ್ಯಾಜ್ಯ ಸುಡುವಿಕೆ ಹಾಗೂ ಪ್ರತಿಕೂಲ ಹವಾಮಾನವೂ ಮಾಲಿನ್ಯ ಹೆಚ್ಚಳಕ್ಕೆ ಕಾರಣವಾಗಿವೆ. ಕಡಿಮೆ ಗಾಳಿಯ ವೇಗ ಮತ್ತು ವಾತಾವರಣದಲ್ಲಿ ಗಾಳಿಯ ಚಲನೆ ಕಡಿಮೆಯಾಗುವುದರಿಂದ ಮಾಲಿನ್ಯಕಾರಕ ಕಣಗಳು ನೆಲಮಟ್ಟದಲ್ಲೇ ಸಂಗ್ರಹವಾಗುತ್ತವೆ. ನವೆಂಬರ್ 8ರಂದು ದೆಹಲಿಯ ಮಾಲಿನ್ಯದಲ್ಲಿ ವಾಹನ ಸಂಚಾರದ ಕೊಡುಗೆ ಶೇ.19ರಷ್ಟಿದ್ದರೆ, ಕೃಷಿ ತ್ಯಾಜ್ಯ ಸುಡುವಿಕೆಯ ಕೊಡುಗೆ ಅಂದಾಜು ಶೇ.3.5ರಷ್ಟಿತ್ತು ಎಂದು ಮುನ್ಸೂಚನಾ ವ್ಯವಸ್ಥೆ ತಿಳಿಸಿದೆ.

ರಾಜಕೀಯ ಆರೋಪ-ಪ್ರತ್ಯಾರೋಪ

ದೆಹಲಿಯಲ್ಲಿ ವಾಯುಮಾಲಿನ್ಯ ತೀವ್ರಗೊಂಡ ಬೆನ್ನಲ್ಲೇ ಬಿಜೆಪಿ, ಕಾಂಗ್ರೆಸ್ ಮತ್ತು ಆಮ್ ಆದ್ಮಿ ಪಕ್ಷಗಳ ನಡುವೆ ಆರೋಪ–ಪ್ರತ್ಯಾರೋಪ ಶುರುವಾಗಿದೆ. ಪಂಜಾಬ್‌ನಲ್ಲಿ ದೀಪಾವಳಿ ದಿನ ಕೂಳೆ ಸುಡುವ ಘಟನೆಗಳು ಏಕಾಏಕಿ ಹೆಚ್ಚಾಗಿರುವ ಹಿಂದೆ ಸಂಚು ಇದೆ ಎಂದು ಬಿಜೆಪಿ ನಾಯಕ ಕಪಿಲ್ ಮಿಶ್ರಾ ಆರೋಪಿಸಿದ್ದಾರೆ. ಇತ್ತ ಕಾಂಗ್ರೆಸ್ ನಾಯಕ ಪವನ್ ಖೇರಾ, ದೆಹಲಿಯ ವಾಯುಮಾಲಿನ್ಯ ತಪಾಸಣಾ ಕೇಂದ್ರಗಳಲ್ಲಿ ಪಿಎಂ 2.5 ದತ್ತಾಂಶ ದಾಖಲಾಗದಿರುವ ಬಗ್ಗೆ ಪ್ರಶ್ನಿಸಿದ್ದಾರೆ. ಆಮ್ ಆದ್ಮಿ ಪಕ್ಷದ ಸೌರಭ್ ಭಾರದ್ವಾಜ್, ಬಿಜೆಪಿ ಸರ್ಕಾರ ಎಕ್ಯೂಐ ಅಂಕಿಅಂಶಗಳನ್ನು ತಿರುಚುತ್ತಿದೆ ಎಂದು ದೂರಿದ್ದಾರೆ.

ಅಕ್ರಮ ಮನೆಗಳ ಸಕ್ರಮ ಶುಲ್ಕದಲ್ಲಿ ಶೇ.50 ರಿಯಾಯಿತಿ: ಸಿಎಂ ಡಿ.ಕೆ.ಶಿವಕುಮಾರ್

ಒಂದು ಲಕ್ಷ ಆಸ್ತಿದಾರರಿಗೆ ಭೂ ಗ್ಯಾರಂಟಿ ಭಾಗ್ಯ: ಬಿಡಿಎ 50ನೇ ವರ್ಷಾಚರಣೆ ನೆನಪಿಗೆ ಸುಸಜ್ಜಿತ ಕಟ್ಟಡ ನಿರ್ಮಾಣ

ಬೆಂಗಳೂರು, ನ.9: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ 50ನೇ ವರ್ಷಾಚರಣೆ ಸಂದರ್ಭದಲ್ಲಿ ಆಸ್ತಿ ದಾಖಲೆಗಳಿಲ್ಲದ ಭೂಮಾಲಿಕರಿಗೆ ಭೂ ಗ್ಯಾರಂಟಿ ಸೇರಿ ಹೊಸ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಯೋಜನೆ ರೂಪಿಸಲಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಯೋಜನೆಗಳ ಕುರಿತಂತೆ ಪ್ರಾಧಿಕಾರದ ಕಚೇರಿಯಲ್ಲಿ ಸೋಮವಾರ ಪ್ರಗತಿ ಪರಿಶೀಲನೆ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬಿಡಿಎ ಭೂಸ್ವಾಧೀನಕ್ಕೊಳಪಟ್ಟ ಜಮೀನಿನಲ್ಲಿ ದಿನಾಂಕ 10.7.2008 ರ ಪೂರ್ವದಲ್ಲಿ ನಿರ್ಮಿಸಲಾದ ಅನಧಿಕೃತ ಕಟ್ಟಡಗಳನ್ನು ಸಕ್ರಮಗೊಳಿಸಲು ಈಗಾಗಲೇ ಅಧಿಸೂಚನೆ ಹೊರಡಿಸಿದ್ದು, ಈ ಹಿಂದಿನ ಸಕ್ರಮ ಶುಲ್ಕದಲ್ಲಿ ಶೇ.50ರಷ್ಟು ರಿಯಾಯಿತಿ ನೀಡಲು ತೀರ್ಮಾನಿಸಲಾಗಿದೆ ಎಂದು ಹೇಳಿದರು.

ಈ ಸೌಲಭ್ಯ ಕಲಂ 38(ಡಿ) ತಿದ್ದುಪಡಿ ಮೂಲಕ ಈಗಾಗಲೇ ಜಾರಿಗೆ ಬಂದಿದ್ದು, ಡಿಸೆಂಬರ್ 15 ರ ಒಳಗಾಗಿ ಅರ್ಜಿ ಸಲ್ಲಿಸಲು ಅವಕಾಶವಿದೆ. ಎರಡು ವರ್ಷಗಳ ಅವಧಿಯೊಳಗಾಗಿ ಈ ಸೌಲಭ್ಯವನ್ನು ಬಳಸಿಕೊಳ್ಳದಿದ್ದರೆ, ಪ್ರಾಧಿಕಾರದ ಭೂಮಿಯಲ್ಲಿರುವ ಅಂತಹ ಕಟ್ಟಡಗಳನ್ನು ತೆರವುಗೊಳಿಸಲಾಗುವುದು ಎಂದು ಸ್ಪಷ್ಟಪಡಿಸಿದರು.

2008ಕ್ಕಿಂತ ಮುಂಚೆ ಮನೆ ಕಟ್ಟಿದವರಿಗೆ, ಸುಮಾರು 1 ಲಕ್ಷ ಮಾಲೀಕರಿಗೆ ಆಸ್ತಿ ದೊರಕಿಸಬೇಕು ಎಂಬ ಉದ್ದೇಶದಿಂದ ಹಿಂದಿನ ಸರ್ಕಾರ ಅವಕಾಶ ನೀಡಿತು. 2021ರಲ್ಲಿಯೇ ದರ ನಿಗದಿ ಮಾಡಿತ್ತು. ಆದರೆ ಶುಲ್ಕ ಹೆಚ್ಚಾಯಿತೆಂದು ಕೇವಲ 600ಜನ ಮಾತ್ರ ಅರ್ಜಿ ಹಾಕಿದ್ದರು. ಆದರೆ ನಾವು ಶುಲ್ಕ ಕಡಿಮೆ ಮಾಡಿ ಇನ್ನೊಂದು ಅವಕಾಶ ನೀಡಿದ್ದೇವೆ. ಕ್ಲೀನ್ ಬಿಡಿಎ, ಪರಿಶುದ್ಧವಾದ ಆಡಳಿತವನ್ನು ಬೆಂಗಳೂರಿಗರಿಗೆ ನೀಡುವ ಉದ್ದೇಶದಿಂದ ಸರ್ಕಾರ ಈ ಸೌಲಭ್ಯವನ್ನು ಜಾರಿಗೊಳಿಸಿದೆ ಎಂದು ಹೇಳಿದರು.



ನಿಗದಿತ ಅವಧಿಯ ಒಳಗಾಗಿ ಅರ್ಜಿಯನ್ನು ಸೂಕ್ತ ದಾಖಲೆಗಳೊಂದಿಗೆ ಸಲ್ಲಿಸಿ, ಈ ಸೌಲಭ್ಯವನ್ನು ಬಳಸಿಕೊಂಡು ಆಸ್ತಿಯ ಹಕ್ಕನ್ನು ಪಡೆದುಕೊಳ್ಳಲು ಇದು ಉತ್ತಮ ಅವಕಾಶವಾಗಿದೆ ಎಂದರು.

ಸುಸಜ್ಜಿತ ಕಟ್ಟಡ

ಬಿಡಿಎ 50ನೇ ವರ್ಷಾಚರಣೆ ಹಿನ್ನೆಲೆಯಲ್ಲಿ 1ಲಕ್ಷ ಚದರ ಅಡಿ ವ್ಯಾಪ್ತಿಯಲ್ಲಿ ಸುಸಜ್ಜಿತವಾದ ಬಹುಪಯೋಗಿ ಪ್ರಾಧಿಕಾರದ ಕಟ್ಟಡವನ್ನು ನಿರ್ಮಿಸಲು ಈಗಾಗಲೇ ಯೋಜನೆ ರೂಪಿಸಲಾಗಿದೆ ಎಂದು ಹೇಳಿದರು.

(5ನೇ ಪುಟಕ್ಕೆ)

ಮಾರ್ಗಸೂಚಿ ದರದ ಮೌಲ್ಯ:

ಮೂಲೆ ನಿವೇಶನ ಹೊರತುಪಡಿಸಿ ಕಟ್ಟಡದೊಂದಿಗಿನ ಭೂಮಿಯ ವ್ಯಾಪ್ತಿ 20/30 ರವರೆಗೆ ಪ್ರಸ್ತುತ ಮಾರ್ಗಸೂಚಿ ಮೌಲ್ಯದ ಶೇ.5ರಷ್ಟು, 20/30 ಕ್ಕಿಂತ ಹೆಚ್ಚು ಮತ್ತು 30/40 ರವರೆಗೆ ಶೇ.12.5% ರಷ್ಟು, 30/40ಕ್ಕಿಂತ ಹೆಚ್ಚು ಮತ್ತು 40/60 ರವರೆಗೆ ಶೇ.20% ರಷ್ಟು ಮತ್ತು 40/60 ಕ್ಕಿಂತ ಹೆಚ್ಚು ಮತ್ತು 50/80 ರವರೆಗೆ ಶೇ.25% ರಷ್ಟು ದರವನ್ನು ನಿಗದಿಪಡಿಸಲಾಗಿದೆ. ಇದು ಈ ಹಿಂದಿನ ಸರ್ಕಾರ ನಿಗದಿಪಡಿಸಿದ್ದ ದರಕ್ಕಿಂತ ಶೇ.50ರಷ್ಟು ಕಡಿಮೆಯಾಗಿದೆ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ಪ್ರೋತ್ಸಾಹದಾಯಕ ನಿವೇಶನ ಸೌಲಭ್ಯ

ಕೆಂಪೇಗೌಡ ಬಡಾವಣೆ ಸೇರಿ ಇತರೆಡೆ ವ್ಯಾಜ್ಯವಿಲ್ಲದೆ ಸ್ವಇಚ್ಛೆಯಿಂದ ಆಸ್ತಿ ಬಿಟ್ಟು ಕೊಟ್ಟವರಿಗೆ ಒಂದು ಎಕರೆಗೆ 30/40 ನಿವೇಶನ ನೀಡುವ ಪ್ರಕ್ರಿಯೆಗೆ ಚಾಲನೆ ನೀಡಿದ್ದೇವೆ. ವಿಶೇಷ ಪ್ರೋತ್ಸಾಹಕವಾಗಿ ನಿವೇಶನ ನೀಡುವ ಕಾರ್ಯ 2014 ರಿಂದ ಬಾಕಿ ಇದ್ದು, 1989 ಕಾನೂನಿನ ಪ್ರಕಾರ ಇದಕ್ಕಾಗಿ ಸೂಕ್ತ ಅರ್ಜಿ ಹಾಕಬೇಕು. ಇದಕ್ಕೆ ಬೆಲೆ ನಿಗದಿ ಮಾಡಲಾಗುವುದು ಎಂದರು. ಶಿವರಾಮ ಕಾರಂತ ಬಡಾವಣೆಯಲ್ಲಿ ಜಮೀನು ನೀಡಿದ ರೈತರಿಗೆ ಒಂದೇ ದಿನದಲ್ಲಿ ಸೈಟ್ ಮಂಜೂರಾತಿಯನ್ನು ಪಾರದರ್ಶಕವಾಗಿ ಮಾಡಿರುವುದು ಬಿಡಿಎ ಇತಿಹಾಸದಲ್ಲೇ ಮೊದಲು. ಜಮೀನು ನೀಡಿದ ರೈತರ ಉಪಕಾರ ಸ್ಮರಣೆಯಾಗಿ ಅಲ್ಲಿ Wall of gratitude ಹಾಕಿದ್ದೇವೆ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ಉಕ್ರೇನ್–ರಷ್ಯಾ ಯುದ್ಧ ಕೊನೆಗೊಳಿಸಲು ನೆರವು ನೀಡಲು ಸಿದ್ಧ: ಪ್ರಧಾನಿ ಮೋದಿ

ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಜೆಲೆನ್‌ಸ್ಕಿ ಜತೆ ದೂರವಾಣಿ ಮೂಲಕ ಮಾತುಕತೆ

ದ್ವಿಪಕ್ಷೀಯ ಸಹಕಾರ ವೃದ್ಧಿಗೆ ಉಭಯ ನಾಯಕರ ಚರ್ಚೆ

ನವದೆಹಲಿ, ನ.9: ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಜೆಲೆನ್‌ಸ್ಕಿ ಅವರೊಂದಿಗೆ ಸೋಮವಾರ ದೂರವಾಣಿ ಮೂಲಕ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ ಅವರು, ರಷ್ಯಾ–ಉಕ್ರೇನ್ ಯುದ್ಧವನ್ನು ಮಾತುಕತೆ ಹಾಗೂ ರಾಜತಾಂತ್ರಿಕತೆಯ ಮೂಲಕ ಶಾಂತಿಯುತವಾಗಿ ಕೊನೆಗೊಳಿಸಲು ಕರೆ ನೀಡಿದ್ದಾರೆ. ಹಾಗೂ ಸಂಘರ್ಷವನ್ನು ಶಾಂತಿಯುತವಾಗಿ ಬಗೆಹರಿಸಲು ಭಾರತವು ಎಲ್ಲ ನೆರವು ನೀಡಲು ಸಿದ್ಧವಿದೆ ಎಂದಿದ್ದಾರೆ.

ಮಾತುಕತೆ ವೇಳೆ ಉಕ್ರೇನ್‌ನಲ್ಲಿ



ಬೆಳವಣಿಗೆಗಳ ಬಗ್ಗೆ ಝೆಲೆನ್‌ಸ್ಕಿ ಅಭಿಪ್ರಾಯಗಳನ್ನು ಹಂಚಿಕೊಂಡರು. ಉಭಯ ದೇಶಗಳ ಜನರ ಪರಸ್ಪರ ಹಿತದೃಷ್ಟಿಯಿಂದ ಭಾರತ ಮತ್ತು ಉಕ್ರೇನ್ ನಡುವಿನ ದ್ವಿಪಕ್ಷೀಯ ಸಹಕಾರವನ್ನು ವಿವಿಧ ಕ್ಷೇತ್ರಗಳಲ್ಲಿ ಮತ್ತಷ್ಟು ಬಲಪಡಿಸುವ ಕುರಿತು ಇಬ್ಬರೂ ನಾಯಕರು ಚರ್ಚಿಸಿದರು ಎಂದು ಪ್ರಧಾನಿ ಕಾರ್ಯಾಲಯ ತಿಳಿಸಿದೆ.

ಮಾತುಕತೆ – ರಾಜತಾಂತ್ರಿಕತೆಗೆ ಒತ್ತು

ಭಾರತದ ಮಾನವ–ಕೇಂದ್ರಿತ ವಿಧಾನವನ್ನು ಪ್ರಧಾನಿ ಮೋದಿ ಪುನರುಚ್ಚರಿಸಿದ್ದು, ಸಂಘರ್ಷವನ್ನು ಮಾತುಕತೆ ಮತ್ತು ರಾಜತಾಂತ್ರಿಕತೆಯ ಮೂಲಕವೇ ಬಗೆಹರಿಸಬೇಕು ಎಂಬ ಭಾರತದ ನಿರಂತರ ನಿಲುವನ್ನು ಸ್ಪಷ್ಟಪಡಿಸಿದ್ದಾರೆ ಎಂದು ಪಿಎಂಒ ಪ್ರಕಟಣೆಯಲ್ಲಿ ತಿಳಿಸಲಾಗಿದೆ. 21ನೇ ಶತಮಾನವು ಯುದ್ಧದ ಯುಗವಲ್ಲ ಎಂದು ಹಲವು ವೇದಿಕೆಗಳಲ್ಲಿ ಪ್ರತಿಪಾದಿಸಿರುವ ಮೋದಿ, ಯುದ್ಧ ಆರಂಭವಾದಾಗಿನಿಂದಲೂ ಉಕ್ರೇನ್ ಮತ್ತು ರಷ್ಯಾ ನಾಯಕರೊಂದಿಗೆ ನಿರಂತರ ಸಂಪರ್ಕದಲ್ಲಿದ್ದಾರೆ.

ಮಧ್ಯಸ್ಥಿಕೆಗೆ ಭಾರತದ ಸಿದ್ಧತೆ

ಕಳೆದ ಸೆಪ್ಟೆಂಬರ್‌ನಲ್ಲಿ ನವದೆಹಲಿಯಲ್ಲಿ ನಡೆದ ಬ್ರಿಕ್ಸ್ ಶೃಂಗಸಭೆಯ ವೇಳೆಯೂ ಪ್ರಧಾನಿ ಮೋದಿ ಅವರು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರೊಂದಿಗೆ ಉಕ್ರೇನ್ ಯುದ್ಧ ಹಾಗೂ ಮಧ್ಯಪ್ರಾಚ್ಯದಲ್ಲಿನ ಅಮೆರಿಕ–ಇರಾನ್ ಸಂಘರ್ಷದ ಕುರಿತು ಚರ್ಚಿಸಿದ್ದರು. ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರೊಂದಿಗೆ ಸೇರಿ, ಉಕ್ರೇನ್ ಮತ್ತು ರಷ್ಯಾ ನಡುವೆ ಮಧ್ಯಸ್ಥಿಕೆ ವಹಿಸಲು ಭಾರತ ಸಿದ್ಧವಿದೆ ಎಂದು ಮೋದಿ ಹೇಳಿದ್ದರು. ಇದಕ್ಕೆ ರಷ್ಯಾ ಕೂಡ ಸಕಾರಾತ್ಮಕವಾಗಿ ಸ್ಪಂದಿಸಿ ಭಾರತದ ನಿಲುವಿಗೆ ಧನ್ಯವಾದ ಅರ್ಪಿಸಿತ್ತು.

ರಾಷ್ಟ್ರವಿರೋಧಿ ಆರೋಪ: ಬಹಿರಂಗ ಚರ್ಚೆಗೆ ಬರುವಂತೆ ಪ್ರಧಾನಿಗೆ ರಾಹುಲ್‌ಗಾಂಧಿ ಸವಾಲು

ನವದೆಹಲಿ, ನ.9: ತನ್ನನ್ನು ರಾಷ್ಟ್ರವಿರೋಧಿ ಹಾಗೂ ವಿದೇಶಿ ಶಕ್ತಿಗಳ ಪ್ರಭಾವದಲ್ಲಿದ್ದೇನೆ ಎಂಬ ಪ್ರಧಾನಿ ಆರೋಪಕ್ಕೆ ಪ್ರತಿಕ್ರಿಯಿಸಿರುವ ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್‌ಗಾಂಧಿ ಅವರು, ಬಹಿರಂಗ ಚರ್ಚೆಗೆ ಬರುವಂತೆ ನರೇಂದ್ರ ಮೋದಿ ಅವರಿಗೆ ಸವಾಲು ಹಾಕಿದ್ದಾರೆ.

ತಮ್ಮ ಎಕ್ಸ್ ಖಾತೆಯಲ್ಲಿ ಈಬಗ್ಗೆ ಪೋಸ್ಟ್ ಹಂಚಿಕೊಂಡಿರುವ ಅವರು, ಪ್ರಧಾನಿ ಹೇಳಿದ ಸುಳ್ಳುಗಳನ್ನು ಸಿಆರ್‌ಪಿಎಫ್ ಯೋಧರು ನಂಬಿಲ್ಲ. ಅವರು ನಮ್ಮನ್ನು ನಕ್ಸಲ್ ಮನಸ್ಥಿತಿಯವರು ಎಂದರು. ದೇಶದ್ರೋಹಿಗಳು ಯಾರು ಮತ್ತು ವಿದೇಶಿ ಶಕ್ತಿಗಳ ನಿಯಂತ್ರಣದಲ್ಲಿ ಇರುವವರು ಯಾರು ಎಂಬ ಬಗ್ಗೆ ಚರ್ಚೆಯಾಗಲಿ. ಯಾವುದೇ ಸಮಯದಲ್ಲಿ, ಯಾವುದೇ ಸ್ಥಳದಲ್ಲಿ ಚರ್ಚೆಗೆ ಸಿದ್ಧ ಎಂದಿದ್ದಾರೆ. ಹಾಗೂ ಚರ್ಚೆಯ ನಂತರ



ಒಬ್ಬ ಯೋಧನ ಎದುರು ನಿಲ್ಲುವ ಧೈರ್ಯವೂ ಪ್ರಧಾನಿಯವರಿಗೆ ಇರುವುದಿಲ್ಲ ಎಂದುದ್ದಾರೆ.

ನವೆಂಬರ್ 8 ರಂದು ಬಸ್ತಾರ್‌ನಲ್ಲಿ ಭದ್ರತಾ ಸಿಬ್ಬಂದಿಯೊಂದಿಗೆ ದೀಪಾವಳಿ ಆಚರಿಸುವಾಗ ಪ್ರಧಾನಿ ನರೇಂದ್ರ ಮೋದಿಯವರು, ಕಾಡುಗಳಿಂದ ಸಶಸ್ತ್ರ ನಕ್ಸಲರನ್ನು ನಿರ್ಮೂಲನೆ ಮಾಡಲಾಗಿದ್ದರೂ, 'ದಿಮಾಗಿ ನಕ್ಸಲರು' (ಬೌದ್ಧಿಕ ನಕ್ಸಲರು) ಎಂಬ ಗುಂಪು ವಿವಿಧ ಸಂಘಟನೆಗಳು ಮತ್ತು ರಾಜಕೀಯ ಪಕ್ಷಗಳಲ್ಲಿ ನುಸುಳಿಕೊಂಡಿದ್ದು, ಸಂವಿಧಾನ ಹಾಗೂ ಪ್ರಜಾಪ್ರಭುತ್ವದ ವಿರುದ್ಧ ಜನರನ್ನು ಪ್ರಚೋದಿಸುತ್ತಿದ್ದಾರೆ. ನಾವು ಅವರನ್ನು ಗುರುತಿಸಿ, ಸೋಲಿಸಬೇಕು ಮತ್ತು ರಾಷ್ಟ್ರದ ಭದ್ರತೆಯನ್ನು ಖಚಿತಪಡಿಸಿಕೊಳ್ಳಬೇಕು ಎಂದು ಹೇಳಿದ್ದರು. ಈ ಹೇಳಿಕೆಯ ಬೆನ್ನಲ್ಲೇ ರಾಹುಲ್‌ಗಾಂಧಿಯವರು ಈ ಸವಾಲು ಹಾಕಿದ್ದಾರೆ.

ರಾಹುಲ್ ಸವಾಲಿಗೆ ಬಿಜೆಪಿ ಟೀಕೆ

ಪ್ರಧಾನಿ ಮೋದಿ ಅವರೊಂದಿಗೆ ಬಹಿರಂಗ ಚರ್ಚೆ ನಡೆಸುವಂತೆ ರಾಹುಲ್ ಗಾಂಧಿ ಹಲವು ಬಾರಿ ಸವಾಲು ಹಾಕಿದ್ದಾರೆ. ಐದು ನಿಮಿಷಗಳ ಚರ್ಚೆಯಲ್ಲೇ ಪ್ರಧಾನಿ ದೇಶದ್ರೋಹಿ ಎಂಬುದು ಸಾಬೀತಾಗಲಿದೆ ಎಂದು ಈ ಹಿಂದೆ ಹೇಳಿದ್ದರು. ಆದರೆ, ರಾಹುಲ್ ಗಾಂಧಿ ಅವರ ಸವಾಲನ್ನು ಬಿಜೆಪಿ ನಾಯಕರು ಲೇವಡಿ ಮಾಡಿದ್ದಾರೆ. ಸಂಸತ್ತಿನಲ್ಲೇ ಚರ್ಚೆಗೆ ಅವಕಾಶವಿದ್ದರೂ ರಾಹುಲ್ ಗಾಂಧಿ ಅದರಿಂದ ತಪ್ಪಿಸಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಕೂಡ ರಾಹುಲ್ ಗಾಂಧಿ ಹೇಳಿಕೆಗೆ ಪ್ರತಿಕ್ರಿಯಿಸಿದ್ದು, ಪ್ರಧಾನಿಯವರು ಚರ್ಚೆಗೆ ಸ್ಥಳ ಆಯ್ಕೆ ಮಾಡಲಿ ಎಂದು ಕೇಳುವ ಬದಲು ಸಂಸತ್ತಿನಲ್ಲೇ ಚರ್ಚೆ ನಡೆಸಬಹುದು. ಲೋಕಸಭೆಯ ವಿರೋಧ ಪಕ್ಷದ ನಾಯಕನಾಗಿ ರಾಹುಲ್ ಗಾಂಧಿ ಸ್ವಲ್ಪ ಗಂಭೀರತೆ ಮತ್ತು ಜವಾಬ್ದಾರಿ ಪ್ರದರ್ಶಿಸಬೇಕು ಎಂದು ಹೇಳಿದ್ದಾರೆ.

ಯುದ್ಧ ನಿಲ್ಲಿಸಿ ಸಂಧಾನಕ್ಕೆ ಬರದಿದ್ದರೆ ನರಕ ಸೃಷ್ಟಿ: ಅಮೆರಿಕಕ್ಕೆ ಇರಾನ್ ಬೆದರಿಕೆ

ಟೆಹರಾನ್, ನ.9: ಅಮೆರಿಕ ಮತ್ತು ಇರಾನ್ ನಡುವಿನ ಸಂಘರ್ಷ ಮತ್ತೆ ತೀವ್ರಗೊಳ್ಳುವ ಆತಂಕ ಹೆಚ್ಚುತ್ತಿರುವಂತೆ, ಯುದ್ಧವನ್ನು ಅಂತ್ಯಗೊಳಿಸಿ, ಸಂಧಾನಕ್ಕೆ ಮುಂದಾಗುವಂತೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತಕ್ಕೆ ಇರಾನ್ ಎಚ್ಚರಿಕೆ ನೀಡಿದೆ.

ಇರಾನ್ ಮುಂದಿಟ್ಟಿರುವ ಎರಡು ದಿನಗಳ ಪ್ರಸ್ತಾವನೆಯನ್ನು ಒಪ್ಪಿಕೊಂಡು ಎಲ್ಲ ರಂಗಗಳಲ್ಲೂ ಯುದ್ಧ ನಿಲ್ಲಿಸಬೇಕು. ಇಲ್ಲದಿದ್ದರೆ ಇರಾನ್‌ನ ಯೋಧರು ಅಮೆರಿಕಕ್ಕೆ ನರಕವನ್ನೇ ತೋರಿಸಲಿದ್ದಾರೆ ಎಂದು ಇರಾನ್ ವಿದೇಶಾಂಗ ಸಚಿವ ಸೆಯ್ಯದ್ ಅಬ್ಬಾಸ್ ಅರಾಘ್ಚಿ ಹೇಳಿದ್ದಾರೆ.

ಅಮೆರಿಕದ ಮಧ್ಯಂತರ ಚುನಾವಣೆಗಳ ಫಲಿತಾಂಶದ ಬೆನ್ನಲ್ಲೇ ಅರಾಘ್ಚಿ ಅವರ ಈ ರಾಜತಾಂತ್ರಿಕ ಎಚ್ಚರಿಕೆ ಹೊರಬಿದ್ದಿದೆ. ಚುನಾವಣಾ ಫಲಿತಾಂಶಗಳು ಪ್ರಾದೇಶಿಕ ಮಾತುಕತೆಗಳ ವೇಗದ ಮೇಲೆ ಪರಿಣಾಮ ಬೀರಿವೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಭಾನುವಾರ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಇರಾನ್ ವಿದೇಶಾಂಗ ಸಚಿವರು, ಮಾತುಕತೆಯ ಮೂಲಕ ಸಂಘರ್ಷ ತಗ್ಗಿಸಬೇಕೇ ಅಥವಾ ಭೀಕರ ಪ್ರಾದೇಶಿಕ ಯುದ್ಧಕ್ಕೆ ಅವಕಾಶ ಮಾಡಿಕೊಡಬೇಕೇ ಎಂಬ ನಿರ್ಧಾರ ಈಗ ವಾಷಿಂಗ್ಟನ್ ಕೈಯಲ್ಲಿದೆ ಎಂದು ಹೇಳಿದ್ದಾರೆ.

ಇರಾನ್ ರಾಜಧಾನಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅರಾಘ್ಚಿ, ಕದನ ವಿರಾಮಕ್ಕೆ



ಸಂಬಂಧಿಸಿದ ರಾಜತಾಂತ್ರಿಕ ಪ್ರಯತ್ನಗಳು ಸದ್ಯಕ್ಕೆ ಸ್ಥಗಿತಗೊಂಡಿವೆ. ಅಮೆರಿಕದ ರಾಜಕೀಯ ಬೆಳವಣಿಗೆಗಳೇ ಈ ಬಿಕ್ಕಟ್ಟಿಗೆ ಪ್ರಮುಖ ಕಾರಣ ಎಂದು ಹೇಳಿದ್ದಾರೆ ಎಂದು ಸುದ್ದಿ ಮಾಧ್ಯಮವೊಂದು ವರದಿ ಮಾಡಿದೆ.

ಅಮೆರಿಕದ ಚುನಾವಣಾ ಫಲಿತಾಂಶಗಳು ಎಲ್ಲರಿಗೂ ಆಘಾತ ತಂದಿರುವುದು ಮಾತುಕತೆ ಸ್ಥಗಿತಗೊಳ್ಳಲು ಪ್ರಮುಖ ಕಾರಣ. ಪರಿಸ್ಥಿತಿ ಸಹಜ ಸ್ಥಿತಿಗೆ ಮರಳಲು ಮತ್ತು ಮಧ್ಯಸ್ಥಿಕೆ ವಹಿಸುತ್ತಿರುವ ರಾಷ್ಟ್ರಗಳ ಪ್ರತಿನಿಧಿಗಳು ಮತ್ತೆ ಭೇಟಿ ನೀಡಲು ಅನುಕೂಲಕರ ವಾತಾವರಣ ನಿರ್ಮಾಣವಾಗಲು ಸ್ವಲ್ಪ ಸಮಯ ಬೇಕಾಗುತ್ತದೆ. ನಾವು ಕಾಯಬೇಕಿದೆ' ಎಂದು ಅರಾಘ್ಚಿ ತಿಳಿಸಿದ್ದಾರೆ.

ಮತ್ತೊಂದೆಡೆ, ಇರಾನ್‌ನ 38 ಪ್ರಮುಖ ಸೇತುವೆಗಳನ್ನು ಕೇವಲ ಒಂದು ಗಂಟೆಯಲ್ಲಿ ಧ್ವಂಸಗೊಳಿಸುವ ಸಾಮರ್ಥ್ಯ ಅಮೆರಿಕಕ್ಕಿದೆ ಎಂಬ ಟ್ರಂಪ್ ಹೇಳಿಕೆ ಉಭಯ ದೇಶಗಳ ನಡುವಿನ ಉದ್ವಿಗ್ನತೆಯನ್ನು ಮತ್ತಷ್ಟು ಉಲ್ಬಣಿಸುವಂತೆ ಮಾಡಿದೆ. ಇರಾನ್‌ನ ಪರಮಾಣು ಕಾರ್ಯಕ್ರಮ ಹಾಗೂ ಆಯಕಟ್ಟಿನ ಹಾರ್ಮುಜ್ ಜಲಸಂಧಿ ಪುನಃ ತೆರೆಯುವ ವಿಚಾರದಲ್ಲಿ ಮಾತುಕತೆಗಳ ಮೂಲಕ ಸ್ಪಷ್ಟ ಪ್ರಗತಿ ಕಂಡುಬಂದರೆ ಅಮೆರಿಕ ಸೇನೆಯನ್ನು ಮತ್ತೆ ಯುದ್ಧಕ್ಕೆ ಕಳುಹಿಸುವ ಸಾಧ್ಯತೆ ತೀರಾ ಕಡಿಮೆ ಎಂದು ಹೇಳಿದ್ದಾರೆ. ಆದರೆ, ಇರಾನ್‌ನ 38 ಸೇತುವೆಗಳು ಹಾಗೂ ಪ್ರಮುಖ ಮೂಲಸೌಕರ್ಯಗಳನ್ನು ಧ್ವಂಸಗೊಳಿಸುವ ಸಾಮರ್ಥ್ಯವನ್ನು ಅಮೆರಿಕ ಹೊಂದಿದೆ ಎಂದೂ ಎಚ್ಚರಿಸಿದ್ದಾರೆ ಎಂದು ಸಿಎನ್‌ಎನ್ ವರದಿ ಮಾಡಿದೆ.

ಕದನ ವಿರಾಮ: ಕತಾರ್ ಪ್ರಧಾನಿ ಜತೆ ಟ್ರಂಪ್ ಮಾತುಕತೆ

ಕತಾರ್ ಪ್ರಧಾನ ಮಂತ್ರಿ ಶೇಖ್ ಮೊಹಮ್ಮದ್ ಬಿನ್ ಅಬ್ದುಲ್ ರಹಮಾನ್ ಅಲ್ ಥಾನಿ ಅವರನ್ನು ವೈಟ್‌ಹೌಸ್‌ನಲ್ಲಿ ಸೋಮವಾರ ಭೇಟಿಮಾಡಿದ್ದು ಅಮೆರಿಕದ ಅಧ್ಯಕ್ಷ ಟ್ರಂಪ್ ಇರಾನ್ ಜತೆಗಿನ ಕದನ ವಿರಾಮ ಹಾಗೂ ಪರಮಾಣು ಯೋಜನೆಗಳ ಕುರಿತು ಮಾತುಕತೆಗಳನ್ನು ಪುನರಾರಂಭಿಸುವ ಪ್ರಯತ್ನಗಳ ಬಗ್ಗೆ ಚರ್ಚಿಸಿದ್ದಾರೆ.

ಕಳೆದ ಕೆಲವು ವಾರಗಳಿಂದ ಇರಾನ್ ಮತ್ತು ಅಮೆರಿಕದ ನಡುವಿನ ಪ್ರಮುಖ ಮಧ್ಯಸ್ಥಗಾರರಾಗಿರುವ ಶೇಖ್ ಮೊಹಮ್ಮದ್ ಬಿನ್ ಅಬ್ದುಲ್ ರಹಮಾನ್ ಅಲ್ ಥಾನಿ ಅವರು, ರಾಜತಾಂತ್ರಿಕತೆಗೆ ಮತ್ತಷ್ಟು ಸಮಯಾವಕಾಶ ನೀಡುವಂತೆ ಟ್ರಂಪ್ ಅವರನ್ನು ಕೋರಿದ್ದಾರೆ ಎಂದು ಮೂಲಗಳು ತಿಳಿಸಿವೆ. ಒಂದು ಒಪ್ಪಂದ ಸಾಧ್ಯವೇ ಎಂಬುದನ್ನು ನೋಡಲು ಮತ್ತು ರಾಜತಾಂತ್ರಿಕ ಪ್ರಯತ್ನಗಳಿಗೆ ಅವಕಾಶ ನೀಡಲು ಟ್ರಂಪ್ ಇನ್ನೂ ಸಿದ್ಧರಿದ್ದಾರೆ. ಆದರೆ ಅವರು ಎಷ್ಟು ಸಮಯ ನೀಡಲು ಸಿದ್ಧರಿದ್ದಾರೆ ಎಂಬುದು ಸ್ಪಷ್ಟವಾಗಿಲ್ಲ.

Chief reporter : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com

Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20

Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363



ಮಾನ್ಯ ಮುಖ್ಯಮಂತ್ರಿಗಳಾದ

ಶ್ರೀ ಡಿ.ಕೆ. ಶಿವಕುಮಾರ್

ಅವರಿಂದ ಭೂಮಾಲೀಕರು, ಮನೆಮಾಲೀಕರು ಹಾಗೂ ಬಿಡಿಎ ನಿವೇಶನ ಹಂಚಿಕೆದಾರರಿಗಾಗಿ ನಾಲ್ಕು ಮಹತ್ವದ ಘೋಷಣೆಗಳು.

ಈ ದೀಪಾವಳಿಗೆ, ಬಿಡಿಎ ತೆರೆದಿದೆ ನಿಮಗೆ ಹೊಸ ಅವಕಾಶಗಳ ಬಾಗಿಲು!

ಬಿಡಿಎಗೆ 50ರ ಸಂಭ್ರಮ! ನಿಮಗಾಗಿ ನಾಲ್ಕು ಹೊಸ ಅವಕಾಶಗಳು!!

ಬಿಡಿಎ ತನ್ನ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿರುವ ಈ ಸಂದರ್ಭದಲ್ಲಿ , ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್ ಅವರು ಮನೆಮಾಲೀಕರು, ಭೂಮಾಲೀಕರು ಹಾಗೂ ಬಿಡಿಎ ನಿವೇಶನ ಹಂಚಿಕೆದಾರರ ಅನುಕೂಲಕ್ಕಾಗಿ ನಾಲ್ಕು ಮಹತ್ವದ ಯೋಜನೆಗಳನ್ನು ಘೋಷಿಸಿದ್ದಾರೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 17 ಡಿಸೆಂಬರ್ 2026

1 ನಿಮ್ಮ ಮನೆಗೆ ಕಾನೂನುಬದ್ಧ ಮಾನ್ಯತೆ ಪಡೆಯಲು ಇಲ್ಲಿದೆ ಅವಕಾಶ!

10 ಜುಲೈ 2008ರ ಮೊದಲು ಬಿಡಿಎ ಸ್ವಾಧೀನಪಡಿಸಿಕೊಂಡ ಜಮೀನಿನಲ್ಲಿ ಮನೆ ನಿರ್ಮಿಸಿಕೊಂಡು ವಾಸಿಸುತ್ತಿರುವ ಕುಟುಂಬಗಳಿಗೆ ಸಿಹಿಸುದ್ದಿ!

ಅರ್ಹತೆ ಹೊಂದಿರುವ ನಿಮ್ಮ ಮನೆಯನ್ನು ಈಗ ಸಕ್ರಮಗೊಳಿಸಿಕೊಳ್ಳಲು ಅವಕಾಶ.

ಅದೂ ಶೇ. 50ರಷ್ಟು ಕಡಿತಗೊಂಡ ಶುಲ್ಕದಲ್ಲಿ!

ನಿಯಮಾನುಸಾರ ಅರ್ಹತಾ ಷರತ್ತುಗಳು ಅನ್ವಯಿಸುತ್ತವೆ.

ಅರ್ಜಿ ಸಲ್ಲಿಸಲು ಸ್ಕ್ಯಾನ್ ಮಾಡಿ

2 ಬಿಡಿಎ ನಿವೇಶನ ಹೊಂದಿದ್ದೀರಾ? ನಿಮಗೆ ಇನ್ನಷ್ಟು ಜಾಗ ಸಿಗಬಹುದು!

ನಿಮ್ಮ ನಿವೇಶನದ ಪಕ್ಕದಲ್ಲಿ ಅಥವಾ ಹಿಂಭಾಗದಲ್ಲಿ ಬಿಡಿಎಗೆ ಸೇರಿದ ಹೆಚ್ಚುವರಿ ಜಾಗವಿದೆಯೇ?

ಆ ಜಾಗವನ್ನು ನಿಮಗೆ ಹಂಚಿಕೆ ಮಾಡುವಂತೆ ಈಗ ಅರ್ಜಿ ಸಲ್ಲಿಸಬಹುದು. ಜಾಗದ ಲಭ್ಯತೆ ಹಾಗೂ ಅರ್ಹತಾ ಷರತ್ತುಗಳಿಗೆ ಒಳಪಟ್ಟು ಹಂಚಿಕೆ ಮಾಡಲಾಗುವುದು.

ಅರ್ಜಿ ಸ್ವೀಕರಿಸಿದ 60 ದಿನಗಳೊಳಗೆ ನಿಯಮಾನುಸಾರ ಪರಿಶೀಲಿಸಿ, ಜಾಗ ಹಂಚಿಕೆ ಪ್ರಕ್ರಿಯೆಗೆ ಬಿಡಿಎ ಕ್ರಮ ಕೈಗೊಳ್ಳಲಿದೆ.

ಅರ್ಜಿ ಸಲ್ಲಿಸಲು ಸ್ಕ್ಯಾನ್ ಮಾಡಿ

3 ನಿಮ್ಮ ನಿವೇಶನದ ಶುದ್ಧ ಕ್ರಯಪತ್ರಕ್ಕಾಗಿ ಇನ್ನೂ ಕಾಯುತ್ತಿದ್ದೀರಾ?

ನಿಮ್ಮ ಬಹುದಿನಗಳ ಕಾಯುವಿಕೆಗೆ ಈಗ ಅಂತ್ಯ ಸಿಗಬಹುದು!

ಬಿಡಿಎ ಹಂಚಿಕೆ ಮಾಡಿದ ನಿಮ್ಮ ನಿವೇಶನದ ಗುತ್ತಿಗೆ ಅವಧಿ ಮುಗಿದಿದ್ದರೂ, ಇನ್ನೂ ಶುದ್ಧ ಕ್ರಯಪತ್ರ ಪಡೆದಿಲ್ಲವೇ? ಹಾಗಿದ್ದರೆ ನಿಮಗಿದು ಸುವರ್ಣಾವಕಾಶ!

ಸುಮಾರು 20,000 ನಿವೇಶನ ಹಂಚಿಕೆದಾರರಿಗೆ ಅನುಕೂಲವಾಗುವಂತೆ ಬಿಡಿಎ ವಿಶೇಷ ಶುದ್ಧ ಕ್ರಯಪತ್ರ ಮೇಳ ಆಯೋಜಿಸುತ್ತಿದೆ.

ಅರ್ಜಿ ಸಲ್ಲಿಸಲು ಸ್ಕ್ಯಾನ್ ಮಾಡಿ

4 ನಿಮ್ಮ ಮನೆಗೆ ಕಾನೂನುಬದ್ಧ ಮಾನ್ಯತೆ ಪಡೆಯಲು ಇಲ್ಲಿದೆ ಅವಕಾಶ!

ಬೆಂಗಳೂರಿನ ಅಭಿವೃದ್ಧಿಗೆ ನೀವು ನೀಡಿದ ಕೊಡುಗೆಗೆ ಈಗ ಮತ್ತೊಂದು ಅವಕಾಶ!

ನಾಡಪ್ರಭು ಕೆಂಪೇಗೌಡ ಬಡಾವಣೆ ನಿರ್ಮಾಣಕ್ಕಾಗಿ ಸ್ವಯಂ ಪ್ರೇರಣೆಯಿಂದ ನಿಮ್ಮ ಜಮೀನನ್ನು ಬಿಟ್ಟುಕೊಟ್ಟು ನಗದು ಪರಿಹಾರ ಪಡೆದಿದ್ದೀರಾ?

ಹಾಗಿದ್ದರೆ, ಬಿಡಿಎಯಿಂದ ಪ್ರೋತ್ಸಾಹಕ ನಿವೇಶನ ಪಡೆಯಲು ನೀವೂ ಅರ್ಹರಾಗಿರಬಹುದು!

ಸರ್ಕಾರದ ವಿಶೇಷ ಪ್ರೋತ್ಸಾಹಕ ಯೋಜನೆ ಹಾಗೂ ಅನ್ವಯವಾಗುವ ನಿಯಮಗಳ ಪ್ರಕಾರ ಅರ್ಹ ಭೂಮಾಲೀಕರಿಗೆ ನಿವೇಶನಗಳನ್ನು ಹಂಚಿಕೆ ಮಾಡಲಾಗುವುದು.

ಅರ್ಹತೆ ಹಾಗೂ ಹೆಚ್ಚಿನ ವಿವರಗಳಿಗೆ ಬಿಡಿಎ ವೆಬ್‌ಸೈಟ್‌ಗೆ ಭೇಟಿ ನೀಡಿ.



ಡಾ. ಜಿ. ಪರಮೇಶ್ವರ
ಮಾನ್ಯ ಉಪ ಮುಖ್ಯಮಂತ್ರಿಗಳು

50 ವರ್ಷಗಳ ಬಳಿಕ ದೊರಕಿರುವ ಈ ಸುವರ್ಣಾವಕಾಶವನ್ನು ತಪ್ಪಿಸಿಕೊಳ್ಳಬೇಡಿ!

ಮಧ್ಯವರ್ತಿಗಳು ಮತ್ತು ದಲ್ಲಾಳಿಗಳಿಗೆ ಅವಕಾಶವಿಲ್ಲ. ನೇರವಾಗಿ ಬಿಡಿಎ ಸಂಪರ್ಕಿಸಿ.



ಶ್ರೀ ಎನ್.ಎ. ಹ್ಯಾರಿಸ್
ಅಧ್ಯಕ್ಷರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಹಾಗೂ ಶಾಸಕರು, ಶಾಂತಿನಗರ ವಿಧಾನಸಭಾ ಕ್ಷೇತ್ರ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560020

24×7 ಸಹಾಯವಾಣಿ / WhatsApp: 94831 66622
https://bdakarnataka.in / @BDAOfficialGoK

ನಿತ್ಯ ಪಂಚಾಂಗ 10.11.2026 ಮಂಗಳವಾರ



ಶ್ರೀಶಕ 1949 ಶ್ರೀ ಪರಾಭವ ನಾಮ ಸಂವತ್ಸರ, ದಕ್ಷಿಣಾಯಣ ಶರದ್ ಋತು, ಚಾಂದ್ರಮಾನ ಶ್ರಾವಣ-ಆಶ್ವಯುಜ ಮಾಸ

ಬಲಿಪಾಡ್ಯಮಿ, ಆಶ್ವಯುಜ ಬಹುಳ, ಪಾಡ್ಯ, ವಿಶಾಖ ನಕ್ಷತ್ರ, ಬಲಿಪಾಡ್ಯಮಿ, ಚಂದ್ರದರ್ಶನ, ವಿಕ್ರಮ ಶಕೆ ಆರಂಭ, ಗೋವರ್ಧನ/ಕಾಮದೇನು ಪೂಜಾ, ಚಂದ್ರದೀಪದಾನ, ಉಳವಿ ಚನ್ನಬಸವೇಶ್ವರ ಜ.

ದಿನ	ರಾಹುಕಾಲ	ಯಮಗಂಡ	ಗುಳಿಕಕಾಲ
ಭಾನು	ಸ. 5.04– 6.33	12.00– 1.30	3.00– 4.00
ಸೋಮ	ಬೆ. 7.20– 9.04	10.30–12.00	1.30– 3.00
ಮಂಗಳ	ಮ. 3.25– 4.59	9.00–10.30	12.00– 1.30
ಬುಧ	ಮ.12.16– 1.50	7.30– 9.00	10.30– 12.00
ಗುರು	ಮ. 1.50– 3.29	6.00– 7.30	9.00– 10.30
ಶುಕ್ರ	ಬೆ.10.42–12.16	3.00– 4.30	7.30– 9.00
ಶನಿ	ಬೆ. 9.07–10.41	1.30– 3.00	6.00– 7.30

ಸಿದ್ದರಾಮಯ್ಯ, ನನ್ನ ನಡುವೆ ಮುನಿಸಿಲ್ಲ, ಕೆಲವರಿಂದ ಭಿನ್ನಾಭಿಪ್ರಾಯ ಸೃಷ್ಟಿಸಲು ಯತ್ನ: ಸಿಎಂ



ಬೆಂಗಳೂರು, ನ.9: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ನನ್ನ ನಡುವೆ ದೊಡ್ಡ ಮುನಿಸೂ ಇಲ್ಲ, ಸಣ್ಣ ಮುನಿಸೂ ಇಲ್ಲ. ಕೆಲವರು ನಮ್ಮ ನಡುವೆ ಮುನಿಸು ಇದೆ ಎಂಬ ವಾತಾವರಣ ಸೃಷ್ಟಿಸಲು ಪ್ರಯತ್ನಿಸುತ್ತಿದ್ದಾರೆ" ಎಂದು ಸಿಎಂ ಡಿ.ಕೆ. ಶಿವಕುಮಾರ್ ತಿರುಗೇಟು ನೀಡಿದರು.

ಮೇಖ್ರಿ ವೃತ್ತ ಹಾಗೂ ಟೌನ್ ಹಾಲ್ ಬಳಿ ಶಿವಕುಮಾರ್ ಅವರು ಮಾಧ್ಯಮ ಗಳೊಂದಿಗೆ ಸೋಮವಾರ ಪ್ರತಿಕ್ರಿಯೆ ನೀಡಿದರು.

ಸಿದ್ದರಾಮಯ್ಯ ಅವರಿಗೂ ನಿಮಗೂ ಮುನಿಸು ಉಂಟಾಗಿದೆಯೇ ಎಂದು ಕೇಳಿದಾಗ, ರಾಜಕಾರಣದಲ್ಲಿ ನಿಂದಕರು ಇರಬೇಕು, ವಿರೋಧಿಗಳು ಇರಬೇಕು. ಅವರೆಲ್ಲ ಇದ್ದಾಗಲೇ ನಮ್ಮಂತಹವರು ಶುದ್ಧ ರಾಜಕಾರಣ ಮಾಡಲು ಸಾಧ್ಯ. ಸಿದ್ದರಾಮಯ್ಯ ಅವರು ನಮ್ಮ ನಾಯಕರು. ಮಹಾಸ್ವಾಮಿಗಳೂ ಸೇರಿದಂತೆ ಕೆಲವರು ಮಾಧ್ಯಮಗಳಲ್ಲಿ ವಿಭಿನ್ನ ರೀತಿಯಲ್ಲಿ ಬಿಂಬಿಸುತ್ತಿದ್ದಾರೆ. ಈ ವಿಚಾರಗಳಿಗೆ ಸಂಬಂಧಿಸಿದಂತೆ ನಾವು ಅವರಿಗೆ ತಿಳಿಸಬೇಕಾದ ವಿಷಯಗಳನ್ನು ಈಗಾಗಲೇ ತಿಳಿಸಿದ್ದೇವೆ ಎಂದರು.

ಸಿದ್ದರಾಮಯ್ಯನವರು ನಮ್ಮ ನಾಯಕರು. ಸ್ಥಳೀಯ ಸಂಸ್ಥೆಗಳ ಚುನಾವಣೆ ಸಮೀಪಿಸುತ್ತಿದೆ. ಹೀಗಾಗಿ ಅವರ ಬಳಿ ಅನೇಕ ವಿಚಾರಗಳನ್ನ ಚರ್ಚೆ ಮಾಡಬೇಕಾದ್ದರಿಂದ ಅವರನ್ನು ಭೇಟಿ ಮಾಡಿ ಹಬ್ಬದ ಶುಭಾಶಯ ಕೋರಿದ್ದೇನೆ ಎಂದು ಹೇಳಿದರು.

ಸಿದ್ದರಾಮಯ್ಯಗೆ ದೀಪಾವಳಿ ಶುಭಾಶಯ ತಿಳಿಸಿದ ಸಿಎಂ

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸೋಮವಾರ ಭೇಟಿ ಮಾಡಿ ದೀಪಾವಳಿ ಶುಭಾಶಯ ತಿಳಿಸಿದ್ದಾರೆ. ಬೆಂಗಳೂರಿನ ಕಾವೇರಿ ನಿವಾಸದಲ್ಲಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿರುವ ಅವರು, ಈ ಸಂದರ್ಭದಲ್ಲಿ ರಾಜ್ಯ ರಾಜಕೀಯ ಬೆಳವಣಿಗೆಗಳ ಬಗ್ಗೆ ಕೂಡ ಚರ್ಚೆ ನಡೆಸಿದ್ದಾರೆ. ದೀಪಾವಳಿ ಹಬ್ಬದ ಸಂದರ್ಭಕ್ಕೆ ನಿಗಮ ಮಂಡಳಿಗಳ ನೇಮಕಾತಿ ಕೈಗೊಳ್ಳುವುದಾಗಿ ರಾಜ್ಯ ಸರ್ಕಾರ ಭರವಸೆ ನೀಡಿತ್ತು. ಆದರೆ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರ ಪಟ್ಟಿಗಳು ಪ್ರತ್ಯೇಕವಾಗಿದ್ದರಿಂದಾಗಿ ನೇಮಕಾತಿಗಳು ನನೆಗುದಿಗೆ ಬಿದ್ದಿವೆ. ಇಂದಿನ ಭೇಟಿಯಲ್ಲಿ ಆ ಕುರಿತು ಚರ್ಚೆ ನಡೆದಿದೆ ಎನ್ನಲಾಗಿದೆ.

ಗೌರಿ ಲಂಕೇಶ್, ಎಂ.ಎಂ. ಕಲಬುರಗಿ ಹತ್ಯೆ ಹಿಂದೆ ಸಂಘ ಪರಿವಾರದ ಕೈವಾಡ: ಸಚಿವ ಖರ್ಗೆ ಆರೋಪ



ತಿರುವನಂತಪುರಂ, ನ.9: ಗೌರಿ ಲಂಕೇಶ್, ಎಂ.ಎಂ.ಕಲಬುರ್ಗಿ ಹತ್ಯೆ ಹಿಂದೆ ಸಂಘ ಪರಿವಾರದವರ ಕೈವಾಡವಿದೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಗಂಭೀರ ಆರೋಪ ಮಾಡಿದ್ದಾರೆ. ಕೇರಳದ ಎರ್ನಾಕುಲಂನಲ್ಲಿ ನಡೆದ ಮುಸ್ಲಿಂ ಯೂತ್ ಲೀಗ್ ರಾಜ್ಯ ಸಮ್ಮೇಳನದಲ್ಲಿ ಮಾತನಾಡಿದ ಖರ್ಗೆ, ಮುಂದಿನ 6 ತಿಂಗಳಲ್ಲಿ ಹತ್ಯೆ ಪ್ರಕರಣದ ಆರೋಪಿಗಳನ್ನು ಬಂಧಿಸಲಾಗುವುದು. ಪ್ರಕರಣಗಳ ತನಿಖೆ ಮತ್ತು ಕ್ರಮಕ್ಕೆ ಸರ್ಕಾರ ಬದ್ಧವಾಗಿದೆ ಎಂದು ತಿಳಿಸಿದ್ದಾರೆ. ಈ ಹತ್ಯೆಗಳ ಹಿಂದೆ ಸಂಘಕ್ಕೆ ಸಂಬಂಧಿಸಿದ ವ್ಯಕ್ತಿಗಳಿದ್ದಾರೆ. ರಾಜ್ಯ ಸರ್ಕಾರವು ತನಿಖೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದೆ ಎಂದು ಮಾತನಾಡಿದ್ದಾರೆ.

ರಾಜ್ಯಮಟ್ಟದ 161ನೇ ಏಕಗವಾಕ್ಷಿ ಅನುಮೋದನಾ ಸಮಿತಿಯಿಂದ 147 ಯೋಜನೆಗಳಿಗೆ ಒಪ್ಪಿಗೆ

6,825 ಕೋಟಿ ಬಂಡವಾಳ ಹೂಡಿಕೆ, 18600 ಉದ್ಯೋಗ ಸೃಷ್ಟಿ: ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್



ಬೆಂಗಳೂರು, ನ.9: ರಾಜ್ಯದಲ್ಲಿ ಬೆಂಗಳೂರಿನ ಆಚೆಗೂ ಕೈಗಾರಿಕಾ ಬೆಳವಣಿಗೆಗೆ ಮತ್ತಷ್ಟು ವೇಗ ನೀಡಲು ಒಟ್ಟು 6,825 ಕೋಟಿ ಮೊತ್ತದ ಬಂಡವಾಳ ಹೂಡಿಕೆಗೆ ಅವಕಾಶ ಕಲ್ಪಿಸುವ 147 ಕೈಗಾರಿಕಾ ಯೋಜನೆಗಳಿಗೆ ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯಮಟ್ಟದ 161ನೇ ಏಕಗವಾಕ್ಷಿ ಅನುಮೋದನಾ ಸಮಿತಿಯು ಒಪ್ಪಿಗೆ ನೀಡಿದೆ.

ಈ ಯೋಜನೆಗಳ ಮೂಲಕ ರಾಜ್ಯದಾದ್ಯಂತ 18,600 ಉದ್ಯೋಗಾವಕಾಶಗಳು ಸೃಷ್ಟಿಯಾಗುವ ನಿರೀಕ್ಷೆಯಿದೆ. ಅನುಮೋದನೆ ಪಡೆದ ಯೋಜನೆಗಳ ಪೈಕಿ 131 ಯೋಜನೆಗಳು ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳನ್ನು ಹೊರತುಪಡಿಸಿ ರಾಜ್ಯದ ಇತರ ಜಿಲ್ಲೆಗಳಲ್ಲಿ ಹೂಡಿಕೆ ಆಗಲಿದ್ದು, ಪ್ರಾದೇಶಿಕ ಕೈಗಾರಿಕಾ ಬೆಳವಣಿಗೆಗೆ ಇನ್ನಷ್ಟು ಉತ್ತೇಜನ ನೀಡಲಿದೆ ಎಂದು ಸಭೆ ಬಳಿಕ ಸಚಿವ ಎಂ.ಬಿ. ಪಾಟೀಲ್ ತಿಳಿಸಿದ್ದಾರೆ.

ಪ್ರಮುಖ ಹೂಡಿಕೆಗಳ ಪೈಕಿ ದೇವನಹಳ್ಳಿ ಬಳಿ ಅದ್ವೈತ್ ಟೆಕ್‌ನ 380 ಕೋಟಿ ವೆಚ್ಚದ ಐಟಿ ಹಾಗೂ ಐಟಿಇಎಸ್ ಪಾರ್ಕ್ ನಿರ್ಮಾಣ. ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರಿನಲ್ಲಿ ಓಎಫ್‌ಬಿ ಟೆಕ್‌ನ 245 ಕೋಟಿ ವೆಚ್ಚದ ಕಂಟೇನರ್ ಗಾಜಿನ ಘಟಕ ನಿರ್ಮಾಣ, ಮೈಸೂರು ಜಿಲ್ಲೆಯ ಕೊಚನಹಳ್ಳಿಯಲ್ಲಿ ಎಫ್‌ಐಇಎಂ ಇಂಡಸ್ಟ್ರೀಸ್‌ನ 183 ಕೋಟಿ ಮೊತ್ತದ ಎಲೆಕ್ಟ್ರಾನಿಕ್ ಘಟಕಗಳ ತಯಾರಿಕೆ, ಬಳ್ಳಾರಿ ಜಿಲ್ಲೆಯ ಬೆಳಗಲ್ಲುವಿನಲ್ಲಿ ಅನಂತ್ ಸ್ಟೀಲ್ಸ್‌ನ 119.41 ಕೋಟಿ ಮೊತ್ತದ ಉಕ್ಕಿನ ಸರಳುಗಳ ತಯಾರಿಕೆ ಘಟಕಗಳು ಸೇರಿವೆ.

ವಿವಿಧ ವಲಯಗಳಲ್ಲಿ ಹೂಡಿಕೆಗೆ ಉತ್ತೇಜನ

ಅನುಮೋದನೆ ಪಡೆದ ಯೋಜನೆಗಳು ಆಹಾರ ಸಂಸ್ಕರಣೆ, ಜವಳಿ, ಡೇಟಾ ಸೆಂಟರ್, ಸೆಮಿಕಂಡಕ್ಟರ್, ಎಲೆಕ್ಟ್ರಾನಿಕ್ಸ್ ಸಿಸ್ಟಮ್ ಡಿಸೈನ್ ಮತ್ತು ಮ್ಯಾನುಫ್ಯಾಕ್ಚರಿಂಗ್ (ಇಎಸ್‌ಡಿಎಂ), ಐಟಿ ಪಾರ್ಕ್, ಮುದ್ರಿತ ಸರ್ಕ್ಯೂಟ್ ಬೋರ್ಡ್‌ಗಳ ಜೋಡಣೆ, ವೈಮಾಂತರಿಕ್ಷ, ಸಕ್ಕರೆ, ಜನರಲ್ ಎಂಜಿನಿಯರಿಂಗ್ ಸೇರಿದಂತೆ ವಿವಿಧ ತಯಾರಿಕಾ ವಲಯಗಳಿಗೆ ಸಂಬಂಧಿಸಿವೆ. ಇದರಿಂದ ರಾಜ್ಯದ ಕೈಗಾರಿಕಾ ವಲಯದಲ್ಲಿ ವೈವಿಧ್ಯಮಯ ಹೂಡಿಕೆಗಳಿಗೆ ಗಮನಾರ್ಹ ಉತ್ತೇಜನ ದೊರೆಯಲಿದೆ ಎಂದು ಪಾಟೀಲ್ ಅವರು ತಿಳಿಸಿದ್ದಾರೆ.

ಸಭೆಯಲ್ಲಿ ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ. ಎಸ್. ಸೆಲ್ವಕುಮಾರ್, ಕೈಗಾರಿಕಾ ಅಭಿವೃದ್ಧಿ ಆಯುಕ್ತರಾದ ಖುಷ್ಬೂ ಜಿ.ಚೌಧರಿ, ಕೆಐಎಡಿಬಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗೋವಿಂದ ರೆಡ್ಡಿ, ಕರ್ನಾಟಕ ಉದ್ಯೋಗ ಮಿತ್ರದ ವ್ಯವಸ್ಥಾಪಕ ನಿರ್ದೇಶಕ ದೊಡ್ಡಬಸವರಾಜು ಸೇರಿದಂತೆ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಎಚ್‌ಡಿಕೆ ಬೇಜವಾಬ್ದಾರಿ ಕೇಂದ್ರ ಸಚಿವ: ಲಂಚದ ಆರೋಪಕ್ಕೆ ಅಬಕಾರಿ ಸಚಿವ ಶಿವಲಿಂಗೇಗೌಡ ತಿರುಗೇಟು



ಬೆಂಗಳೂರು, ನ.9: ತಮ್ಮ ವಿರುದ್ಧ ಲಂಚದ ಆರೋಪ ಮಾಡಿದ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ವಿರುದ್ಧ ತೀವ್ರ ವಾಗ್ದಾಳಿ ನಡೆಸಿರುವ ಹಾಸನ ಜಿಲ್ಲಾ ಉಸ್ತುವಾರಿ ಸಚಿವ ಶಿವಲಿಂಗೇಗೌಡ ಅವರು, ಅವರೊಬ್ಬ ಬೇಜವಾಬ್ದಾರಿ ಕೇಂದ್ರ ಸಚಿವ ಎಂದು ತಿರುಗೇಟು ನೀಡಿದರು.

ಹಾಸನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಸೋಮವಾರ ಮಾತನಾಡಿದ ಅವರು, ಇದು ಎಐ ಯುಗ. ಯಾರು ಬೇಕಾದರೂ ಸುಳ್ಳು ವಾಟ್ಸ್ ಆಪ್ ಚಾಟ್‌ಗಳನ್ನು ಸೃಷ್ಟಿಮಾಡಿ ಹಂಚಿಕೊಳ್ಳಬಹುದು. ಕುಮಾರಸ್ವಾಮಿ ಬಿಡುಗಡೆ ಮಾಡಿರುವ ಚಾಟ್‌ನಲ್ಲಿ ಶಶಿಕಿರಣ್ ಎಂಬ ವ್ಯಕ್ತಿಯ ಹೆಸರಿದೆಯೇ ಹೊರತು, ಆತ ಯಾರ ಜೊತೆ ಚಾಟ್ ಮಾಡಿದ್ದಾನೆ ಎಂಬ ವಿವರಗಳೇ ಇಲ್ಲ. ರಾತ್ರಿ ಯಾರೋ ತಂದುಕೊಟ್ಟ ದಾಖಲೆ ಎಂದು ಹೇಳುವ ಕುಮಾರಸ್ವಾಮಿ, ಅದನ್ನು ತಂದುಕೊಟ್ಟ ವ್ಯಕ್ತಿಯ ಹೆಸರನ್ನು ಬಹಿರಂಗಪಡಿಸಲಿ ಎಂದು ಸವಾಲು ಹಾಕಿದರು.

ನನ್ನ ವಿರುದ್ಧ ಮಾಡಿರುವ ಆರೋಪ ಸಾಬೀತು ಮಾಡದಿದ್ದರೆ ಸುಮ್ಮನೆ ಬಿಡಲ್ಲ ಎಂದು ಗುಡುಗಿದ ಶಿವಲಿಂಗೇಗೌಡ ಅವರು, ಈ ಚಾಟ್‌ನ ಸತ್ಯಾಸತ್ಯತೆಯನ್ನು ತಿಳಿಯಲು ಕ್ರಮ ಕೈಗೊಂಡಿದ್ದೇವೆ. ಒಂದು ವೇಳೆ ಈ ಆರೋಪ ಸಾಬೀತಾದರೆ ತಪ್ಪು ಮಾಡಿದವರಿಗೆ ಶಿಕ್ಷೆ ಕೊಡಿಸಲು ಸಿದ್ಧ. ಆದರೆ ಸುಳ್ಳು ಎಂದು ಸಾಬೀತಾದಾಗ ಕುಮಾರಸ್ವಾಮಿ ಗೌರವ ಏನಾಗಬೇಕು ಎಂದು ಪ್ರಶ್ನಿಸಿದರು. ಈ ಸಂಬಂಧ ದೂರು ದಾಖಲಿಸಿದ್ದೇವೆ. ತನಿಖೆ ನಡೆಯುತ್ತಿದೆ. ಆದರೆ ರಾಜಕೀಯ ಲಾಭಕ್ಕಾಗಿ ನಿರಪರಾಧಿಗಳ ಹಾಗೂ ಮರ್ಯಾದಸ್ಥರ ಮಾನಹಾನಿ ಮಾಡುವ ಪ್ರವೃತ್ತಿಯನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದರು.

ಕೆಐಐಟಿ, ಕಿಸ್‌ಗೆ ಭೇಟಿ ನೀಡಿದ ಇಸ್ರೇಲ್ ಉನ್ನತ ನಿಯೋಗ: ಡಾ.ಅಚ್ಯುತ ಸಮಂತ ಸಾಧನೆಗೆ ಪ್ರಶಂಸೆ



ಭುವನೇಶ್ವರ, ನ.7: ಇಲ್ಲಿನ ಕಳಿಂಗ ಇನ್ಸ್ಟಿಟ್ಯೂಟ್ ಆಫ್ ಇಂಡಸ್ಟ್ರಿಯಲ್ ಟೆಕ್ನಾಲಜಿ (ಕೆಐಐಟಿ) ಮತ್ತು ಕಳಿಂಗ ಇನ್ಸ್ಟಿಟ್ಯೂಟ್ ಆಫ್ ಸೋಶಿಯಲ್ ಸೈನ್ಸಸ್(ಕಿಸ್)ಗೆ ಇಸ್ರೇಲ್‌ನ 20 ಸದಸ್ಯರ ಉನ್ನತ ಮಟ್ಟದ ನಿಯೋಗವು ಭೇಟಿ ನೀಡಿತು. 'ಇಂಡಿಯಾ ಟ್ರೆಕ್ ಫಾರ್ ಗ್ಲೋಬಲ್ ಲೀಡರ್ಸ್' ಕಾರ್ಯಕ್ರಮದ ಅಡಿಯಲ್ಲಿ ಈ ನಿಯೋಗವು ಭಾರತಕ್ಕೆ ಆಗಮಿಸಿದೆ. ಶಿಕ್ಷಣ, ಆರೋಗ್ಯ, ಸಂಶೋಧನೆ, ಬ್ಯಾಂಕಿಂಗ್ ಮತ್ತು ಮಾಹಿತಿ ತಂತ್ರಜ್ಞಾನ ಸೇರಿದಂತೆ ವಿವಿಧ ಕ್ಷೇತ್ರಗಳನ್ನು ಪ್ರತಿನಿಧಿಸುವ ಇಸ್ರೇಲ್‌ನಗಣ್ಯರು ಈ ನಿಯೋಗದಲ್ಲಿದ್ದದ್ದು ವಿಶೇಷವಾಗಿತ್ತು.

ದೇಶದಲ್ಲೇ ವಿಶಿಷ್ಟವಾಗಿ ಗುರುತಿಸಿಕೊಂಡಿರುವ ಎರಡೂ ಸಂಸ್ಥೆಗಳಿಗೆ ಇಸ್ರೇಲ್ ನಿಯೋಗ ಭೇಟಿ ನೀಡಿರುವುದು ಸಂಸ್ಥೆಗಳ ಹಿರಿಮೆಯನ್ನು ಇನ್ನಷ್ಟು ಹೆಚ್ಚಿಸಿದೆ. ಕೆಐಐಟಿಯ ವಿವಿಧ ಕ್ಯಾಂಪಸ್‌ಗಳು ಹಾಗೂ ಕಿಸ್‌ನ ಹಲವು ವಿಭಾಗಗಳಿಗೆ ಭೇಟಿ ನೀಡಿದ ಆಯೋಗದ ಸದಸ್ಯರು ಕಾರ್ಯವೈಖರಿಯ ಮಾಹಿತಿಯನ್ನು ಪಡೆದರು.

ಅಚ್ಯುತ ಸಮಂತ ಸಾಧನೆ ತಿಳಿದಿದ್ದ ನಿಯೋಗ

ಕ್ಯಾಂಪಸ್‌ಗೆ ಇಸ್ರೇಲ್‌ನ ವಿಶೇಷ ನಿಯೋಗವು ಭೇಟಿ ನೀಡುವುದಕ್ಕಿಂತ ಮೊದಲೇ ಕೆಐಐಟಿ ಮತ್ತು ಕಿಸ್‌ನ ಸಂಸ್ಥಾಪಕ ಡಾ. ಅಚ್ಯುತ ಸಮಂತ ಅವರ ಸಾಧನೆಗಳ ಬಗ್ಗೆ ತಿಳಿದಿತ್ತು. ಸಮಂತ ಅವರು ಶಿಕ್ಷಣದ ಮೂಲಕ ಸಾಮಾಜಿಕ ಅಭಿವೃದ್ಧಿಗಾಗಿ ನೀಡಿರುವ ಕೊಡುಗೆಗಳ ಬಗ್ಗೆ ಈ ನಿಯೋಗದ ಸದಸ್ಯರಿಗೆ ಮೊದಲೇ ತಿಳಿದಿತ್ತು. ಭೇಟಿಯ ವೇಳೆ ಈ ಎರಡೂ ಸಂಸ್ಥೆಗಳ ವ್ಯಾಪ್ತಿ, ಮೂಲಸೌಕರ್ಯ ಮತ್ತು ಸಾಧನೆಗಳನ್ನು ಕಂಡು ಅವರು ಬಹಳ ಪ್ರಭಾವಿತರಾದರು ಹಾಗೂ ಪ್ರಶಂಸೆ ವ್ಯಕ್ತಪಡಿಸಿದರು. ಸಾಮಾಜಿಕ ಸಬಲೀಕರಣ ಮತ್ತು ಸಾಂಸ್ಥಿಕ ಬದಲಾವಣೆಗೆ ಎರಡೂ ಸಂಸ್ಥೆಗಳು ದಶಕಗಳಿಂದ ನೀಡುತ್ತಿರುವ ಕೊಡುಗೆ ಬಗ್ಗೆ ನಿಯೋಗದ ಸದಸ್ಯರು ಮಾಹಿತಿ ಪಡೆದುಕೊಂಡರು. ಸಂಸ್ಥೆಗಳ ಪ್ರೇರಕಶಕ್ತಿಯಾಗಿ ಸಮಂತ ಅವರು ಹೇಗೆ ಕೆಲಸ ಮಾಡುತ್ತಿದ್ದಾರೆ ಎಂಬುದರ ಪರಿಚಯವನ್ನೂ ಮಾಡಿಕೊಂಡರು.

ದೃಢ ಸಂಕಲ್ಪ, ಇಚ್ಛಾಶಕ್ತಿಯ ಪ್ರಶಂಸೆ

ದೃಢಸಂಕಲ್ಪ ಮತ್ತು ಇಚ್ಛಾಶಕ್ತಿ ಇಟ್ಟುಕೊಂಡ ದೂರದೃಷ್ಟಿಯುಳ್ಳ ವ್ಯಕ್ತಿಯೊಬ್ಬರು ಕಿಸ್ ಮತ್ತು ಕೆಐಐಟಿಯಂತಹ ವಿಶ್ವದರ್ಜೆಯ ಶ್ರೇಷ್ಠ ಸಂಸ್ಥೆಗಳನ್ನು ಸ್ಥಾಪಿಸಿ ನಡೆಸಬಲ್ಲರು ಎಂದು ನಿಯೋಗದ ಸದಸ್ಯರು ಪ್ರಶಂಸೆ ವ್ಯಕ್ತಪಡಿಸಿದರು. ಪ್ರಪಂಚದಾದ್ಯಂತ ಸಾಕಷ್ಟು ಜನರಲ್ಲಿ ಉತ್ತಮ ಆಲೋಚನೆ ಅಲ್ಲದೆ ಮಹತ್ವಾಕಾಂಕ್ಷೆ ಇರುತ್ತದೆ. ಆದರೆ ಆ ಕನಸುಗಳನ್ನು ನನಸಾಗಿಸುವ ಸಾಮರ್ಥ್ಯ ಮತ್ತು ದೃಢನಿಶ್ಚಯ ಕೆಲವರಲ್ಲಿ ಮಾತ್ರ ಇರುತ್ತದೆ ಎಂದು ಅವರು ಹೇಳಿದರು. ಡಾ.ಅಚ್ಯುತ ಸಮಂತ ಅವರು ಅಂತಹ ದೂರದೃಷ್ಟಿಯುಳ್ಳ ವ್ಯಕ್ತಿಗೆ ಒಂದು ಅತ್ಯುತ್ತಮ ಉದಾಹರಣೆಯಾಗಿದ್ದಾರೆ ಎಂದು ಅವರು ಬಣ್ಣಿಸಿದರು. ಕಾರ್ಯಕ್ರಮದಲ್ಲಿ 40,000 ಕಿಸ್‌ನ ಬುಡಕಟ್ಟು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಹಾರ್ವರ್ಡ್ ಕ್ಲಬ್ ಗೌರವ

ಡಾ. ಅಚ್ಯುತ ಸಮಂತ ಅವರಿಗೆ ಇದೇ ವೇಳೆ 'ಹಾರ್ವರ್ಡ್ ಕ್ಲಬ್ ಆಫ್ ಇಸ್ರೇಲ್' ಗೌರವ ನೀಡಿ ಸನ್ಮಾನಿಸಲಾಯಿತು. ಡಾ. ಸಮಂತ ಅವರು ಶಿಕ್ಷಣ, ಮಾನವೀಯ ಸೇವೆ ಮತ್ತು ಹಿಂದುಳಿದ ಸಮುದಾಯ ವಿಶೇಷವಾಗಿ ಬುಡಕಟ್ಟು ಜನರ ಸಬಲೀಕರಣಕ್ಕೆ ನೀಡಿರುವ ಅಸಾಧಾರಣ ಕೊಡುಗೆಗಳನ್ನು ಗುರುತಿಸಿ ಈ ಗೌರವ ನೀಡಲಾಯಿತು.

ಡಾ. ಸಮಂತ ಅವರ ದೂರದೃಷ್ಟಿ, ಸಮರ್ಪಣಾ ಭಾವ ಮತ್ತು ಮಾನವಕುಲದ ಸೇವೆಗಾಗಿ ಅವರು ನೀಡಿರುವ ಜೀವನಪರ್ಯಂತ ಬದ್ಧತೆಯನ್ನು ಅತಿಥಿಗಳು ಈ ವೇಳೆ ಶ್ಲಾಘಿಸಿದರು.

ಕೆಐಐಟಿ ಮತ್ತು ಕಿಸ್‌ನಲ್ಲಿರುವ ವೇಳೆ ನಿಯೋಗವು ಜ್ಞಾನ ವಿನಿಮಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದಲ್ಲದೆ, ಸಂಸ್ಥೆಯ ವಿದ್ಯಾರ್ಥಿಗಳು ಮತ್ತು ಬೋಧಕ ಸಿಬ್ಬಂದಿಯೊಂದಿಗೆ ಸಂವಾದ ನಡೆಸಿತು. ಕಿಸ್ ಉಪಕುಲಪತಿ ಪ್ರೊ. ಸರನ್‌ಜಿತ್ ಸಿಂಗ್, ಎರಡೂ ಸಂಸ್ಥೆಗಳ ಹಿರಿಯ ಪದಾಧಿಕಾರಿಗಳು ಹಾಜರಿದ್ದರು.

ನಿಯೋಗ ಭೇಟಿನೀಡಿದ್ದು ಖುಷಿ ನೀಡಿದೆ

ಇಸ್ರೇಲ್ನ 20 ಸದಸ್ಯರ ಉನ್ನತ ಮಟ್ಟದ ನಿಯೋಗವು ನಮ್ಮ ಸಂಸ್ಥೆಗಳಿಗೆ ಭೇಟಿ ನೀಡಿರುವುದು ಅತ್ಯಂತ ಖುಷಿ ನೀಡಿದೆ. ಇಡೀ ದೇಶದಲ್ಲಿ ಅಲ್ಲದೆ ವಿಶ್ವದಲ್ಲೇ ನಮ್ಮ ಸಂಸ್ಥೆಗಳ ಹಿರಿಮೆ ತಿಳಿದಿದೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ. ನಮ್ಮ ಕಾರ್ಯಗಳನ್ನು ನಿಯೋಗದ ಸದಸ್ಯರು ಶ್ಲಾಘಿಸಿರುವುದು ಜವಾಬ್ದಾರಿಯನ್ನು ಇನ್ನಷ್ಟು ಹೆಚ್ಚಿಸಿದೆ. ಬದ್ಧತೆಯನ್ನು ಗಟ್ಟಿಗೊಳಿಸಿದೆ. ಇನ್ನೂ ಹೆಚ್ಚು ನಾವು ಸಬಲೀಕರಣ ಹಾಗೂ ಸಾಂಸ್ಥಿಕ ಬದಲಾವಣೆಗೆ ಕಾರ್ಯಕ್ರಮಗಳನ್ನು ರೂಪಿಸಬೇಕು ಎಂಬ ಆಲೋಚನೆಗೆ ಈ ಭೇಟಿ ದಾರಿಮಾಡಿದೆ.

– ಡಾ. ಅಚ್ಯುತ ಸಮಂತ, ಕೆಐಐಟಿ, ಕೆಐಎಂಎಸ್ ಹಾಗೂ ಕೆಐಎಸ್ಎಸ್‌ನ ಸಂಸ್ಥಾಪಕರು ಲೋಕಸಭಾ – ರಾಜ್ಯಸಭಾ ಮಾಜಿ ಸದಸ್ಯರು.

ಪೆಟ್ರೋಲ್‌ನಲ್ಲಿ ಶೇ.31.2ರಷ್ಟು ಎಥೆನಾಲ್ ಹೇಳಿಕೆಗೆ ಬದ್ಧ

ಎಥೆನಾಲ್ ಇಂಧನ ಖರೀದಿ ಗ್ರಾಹರಿಗೆ ಐಚ್ಛಿಕ ಆಯ್ಕೆಯಾಗಲಿ: ಸಚಿವ ರಿಜ್ವಾನ್ ಅರ್ಷದ್

ವಾಹನ ಎಂಜಿನ್‌ಗೆ ಹಾನಿ, ಎಥೆನಾಲ್ ಮಿಶ್ರಿತ ಇಂಧನ ಖರೀದಿ ಗ್ರಾಹಕ ಆಯ್ಕೆಗೆ ಬಿಡಲು ಒತ್ತಾಯ

ಬೆಂಗಳೂರು, ನ.9: ನಿಗದಿತ ಪ್ರಮಾಣಕ್ಕಿಂತಲೂ ಹೆಚ್ಚಿನದಾಗಿ ಎಥೆನಾಲ್ ಅನ್ನು ಪೆಟ್ರೋಲ್ ಮಿಶ್ರಣ ಮಾಡುತ್ತಿರುವುದರಿಂದಾಗಿ ವಾಹನಗಳ ಎಂಜಿನ್‌ಗಳು ಹಾಳಾಗುತ್ತಿವೆ ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ರಿಜ್ವಾನ್ ಅರ್ಷದ್ ಆರೋಪಿಸಿದ್ದು, ಎಥೆನಾಲ್ ಮಿಶ್ರಿತ ಇಂಧನ ಖರೀದಿ ಗ್ರಾಹಕರಿಗೆ ಐಚ್ಛಿಕ ಆಯ್ಕೆಯಾಗಿರಬೇಕೆಂದು ಒತ್ತಾಯಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪೆಟ್ರೋಲ್‌ನಲ್ಲಿ ಶೇ 31.2ರಷ್ಟು ಎಥೆನಾಲ್ ಮಿಶ್ರಣವಾಗಿದ್ದು, ಪೆಟ್ರೋಲ್ ಬಂಕ್‌ಗಳಲ್ಲಿ ಸಂಗ್ರಹಿಸಲಾದ ಮಾದರಿಗಳ ಫಲಿತಾಂಶ ವರದಿಗಳ ಕುರಿತು ಈ ಹಿಂದೆ ತಾವು ನೀಡಿದ ಹೇಳಿಕೆಗೆ ಬದ್ಧರಾಗಿರುವುದಾಗಿ ಪುನರುಚ್ಚರಿಸಿದರು.

ರಾಜ್ಯದಲ್ಲಿ 63 ಕಡೆಗಳಲ್ಲಿ ಮಾದರಿಗಳನ್ನು ಸಂಗ್ರಹಿಸಿ, ಅದರಲ್ಲಿ ಒಂದನ್ನು ಆ ತೈಲ ಕಂಪನಿಗಳ ಪ್ರಯೋಗಾಲಯಕ್ಕೆ ರವಾನಿಸಲಾಗಿತ್ತು. ಮತ್ತೊಂದನ್ನು ಪೆಟ್ರೋಲ್ ಬಂಕ್‌ಗಳ ಮಾಲೀಕರಿಗೆ ನೀಡಲಾಗಿದ್ದು, ಮೂರನೇ ಮಾದರಿಯನ್ನು ಪರೀಕ್ಷೆಗಾಗಿ ಖಾಸಗಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ರಾಜ್ಯ ಸರ್ಕಾರ ಖಾಸಗಿ ಲ್ಯಾಬ್‌ನಿಂದ ಪಡೆದುಕೊಂಡ ವರದಿಯ ಪ್ರಕಾರ ಎಥೆನಾಲ್‌ನ ಮಿಶ್ರಣ ಶೇ.21ರಿಂದ 31ರವರೆಗೂ ಇದೆ. ಇದು ಕೇಂದ್ರ ಸರ್ಕಾರ ನಿರ್ಧರಿಸಿದ ಶೇ.20ರ ಮಿತಿಯನ್ನು ದಾಟಿದೆ. ಆದರೆ ನಮ್ಮ ವರದಿ ವೈಜ್ಞಾನಿಕವಲ್ಲ ಎಂಬ ಆಕ್ಷೇಪಣೆಗಳನ್ನು ತೈಲ ಕಂಪನಿಗಳು ಎತ್ತಿವೆ. ರಾಜ್ಯ ಸರ್ಕಾರ ನಿಯಮಾವಳಿಗಳ ಅನುಸಾರ ಬಂಕ್‌ಗಳು ಮತ್ತು ತೈಲ ಕಂಪನಿಗಳ ಪ್ರತಿನಿಧಿಗಳ ಸಮುಖದಲ್ಲೇ ಮಾದರಿ ಸಂಗ್ರಹಿಸಿದೆ. ಈ ಸಂದರ್ಭದಲ್ಲಿ ಎಲ್ಲಾ ಅಧಿಕಾರಿಗಳು ತಮ್ಮ ಸಹಿ ಹಾಕಿದ್ದಾರೆ.



ರಾಜ್ಯದ ಇ20 ಇಂಧನ ಪರೀಕ್ಷಾ ಫಲಿತಾಂಶಗಳ ಕುರಿತು ಐಒಸಿಎಲ್, ಬಿಪಿಸಿಎಲ್ ಮತ್ತು ಎಚ್.ಪಿ.ಸಿ.ಎಲ್ಲ ಕಂಪನಿಗಳು ಜಂಟಿಯಾಗಿ ಬಿಡುಗಡೆ ಮಾಡಿರುವ ಹೇಳಿಕೆಯನ್ನು ಕರ್ನಾಟಕ ಸರ್ಕಾರ ಪರಿಶೀಲಿಸಿದೆ. ಕರ್ನಾಟಕ ಸರ್ಕಾರವು ತನ್ನ ಪರೀಕ್ಷಾ ಫಲಿತಾಂಶಗಳು ಮತ್ತು ಅವುಗಳ ಆಧಾರದ ಮೇಲೆ ವ್ಯಕ್ತಪಡಿಸಿರುವ ನಿಲುವಿಗೆ ಬದ್ಧವಾಗಿದೆ. ತೈಲ ಮಾರುಕಟ್ಟೆ ಕಂಪನಿಗಳ ಪ್ರಕಟಣೆಯಲ್ಲಿ ತಾಂತ್ರಿಕ ಅಂಶಗಳ ಕುರಿತು ಸುದೀರ್ಘ ವಿವರಣೆಗಳಿವೆಯೇ ಹೊರತು, ಅತ್ಯಂತ ಮುಖ್ಯವಾದ ಪ್ರಶ್ನೆಗೆ ಯಾವುದೇ ಉತ್ತರ ನೀಡಿಲ್ಲ. ಆ ಪ್ರಶ್ನೆಯೆಂದರೆ: ನಮ್ಮ ಪೆಟ್ರೋಲ್ ಬಂಕ್‌ಗಳಲ್ಲಿ ಮಾರಾಟವಾಗುತ್ತಿರುವ ಪೆಟ್ರೋಲ್‌ನಲ್ಲಿ ವಾಸ್ತವವಾಗಿ ಎಷ್ಟು ಪ್ರಮಾಣದ ಎಥೆನಾಲ್ ಇದೆ ಎಂದು ಪ್ರಶ್ನಿಸಿದ್ದಾರೆ.

ಆದರೆ, ಪ್ರತಿಯೊಂದು ಸಂದರ್ಭದಲ್ಲಿಯೂ ಸಂಬಂಧಿತ ಹೇಳಿಕೆಗಳನ್ನು ಮೃದುಗೊಳಿಸಲಾಯಿತು ಅಥವಾ ಹಿಂಪಡೆಯಲಾಯಿತು. ಸಿದ್ಧಪಡಿಸಿರುವ ವರದಿಯನ್ನು ಇಂದಿಗೂ ಸಾರ್ವಜನಿಕರಿಗೆ ಬಹಿರಂಗಪಡಿಸಲಾಗಿಲ್ಲ. ಇ20 ಇಂಧನವು ಇನ್ನೂ ಪ್ರಯೋಗಾತ್ಮಕ ಹಂತದಲ್ಲಿದೆ ಎಂದು ಭಾರತದ ಅಟಾರ್ನಿ ಜನರಲ್ ಅವರು ಸುಪ್ರೀಂ ಕೋರ್ಟ್‌ಗೆ ತಿಳಿಸಿದ್ದರು. ಆದರೆ, ನಂತರ ಅವರ ಕಚೇರಿಯಿಂದ ಈ ಕುರಿತು ಸ್ಪಷ್ಟೀಕರಣ ಹೊರಡಿಸಲಾಯಿತು. ಈ ಎಲ್ಲ ಬೆಳವಣಿಗೆಗಳು ಒಂದು ನಿರ್ದಿಷ್ಟ ಮಾದರಿಯನ್ನು ಸ್ಪಷ್ಟಪಡಿಸುತ್ತವೆ.


ನೀತಿಯನ್ನು ಪ್ರಶ್ನಿಸಿದರೆ, ಅಂತಹ ಧ್ವನಿಯನ್ನು ಅಡಗಿಸಲಾಗುತ್ತದೆ. ಉದ್ಯಮ ಸಂಘಟನೆಗಳು ಮತ್ತು ಕಂಪನಿಗಳು ಒತ್ತಡಕ್ಕೆ ಮಣಿದು ಹಿಂದೆ ಸರಿಯಬಹುದು. ಆದರೆ, ಕರ್ನಾಟಕ ಸರ್ಕಾರ ಮಾತ್ರ ಈ ವಿಷಯದಲ್ಲಿ ಹಿಂದೆ ಸರಿಯುವುದಿಲ್ಲ ಎಂದು ರಿಜ್ವಾನ್ ಅರ್ಷದ್ ತಿಳಿಸಿದರು.

ಇ–20, ಇ–30 ಸೇರಿದಂತೆ ಯಾವುದೇ ಪ್ರಮಾಣದ ಎಥೆನಾಲ್ ಮಿಶ್ರಣವಾಗಿದ್ದರೂ ಅದನ್ನು ಖರೀದಿಸುವ ಆಯ್ಕೆ ಗ್ರಾಹಕರಿಗಿರಬೇಕು. ಮತ್ತು ಎಥೆನಾಲ್ ಮಿಶ್ರಿತ ಇಂಧನ ಖರೀದಿಸುವ ಗ್ರಾಹಕರಿಗೆ ಬೆಲೆಯಲ್ಲಿ ರಿಯಾಯಿತಿ ನೀಡಬೇಕು. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ನಿರ್ಧಾರ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿದರು. ಮೈಲೇಜ್ ಕಡಿಮೆಯಾಗುವುದು ಸೇರಿದಂತೆ ಹಲವು ಸಮಸ್ಯೆಗಳಿವೆ. ಪೆಟ್ರೋಲ್‌ನಲ್ಲಿ 34 ಮೆಗಾ ಜ್ಯುವೆಲ್ಸ್ ಅಂಶಗಳಿರುತ್ತವೆ. ಎಥೆನಾಲ್ ಮಿಶ್ರಣ ಮಾಡಿದರೆ ಅದು 30 ಮೆಗಾ ಜ್ಯುವೆಲ್ಸ್‌ಗೆ ಇಳಿಯುತ್ತದೆ. ಹೀಗಾಗಿ ಮೈಲೇಜ್ ಕಡಿಮೆಯಾಗುತ್ತದೆ ಎಂದು ವಿವರಿಸಿದರು.

ಮಾದರಿ ಫಲಿತಾಂಶ ನೀಡದ ತೈಲ ಕಂಪನಿಗಳು

ತೈಲ ಕಂಪನಿಗಳಿಗೆ ಕಳುಹಿಸಲಾದ ಮಾದರಿಗಳ ಫಲಿತಾಂಶವನ್ನು ನಮಗೆ ನೀಡಲಾಗಿಲ್ಲ. ಪರ್ಯಾಯವಾಗಿ ರಾಜ್ಯ ಸರ್ಕಾರ ನ್ಯಾಷನಲ್ ಅಕಾಡೇಷನ್ ಬೋರ್ಡ್ ಆಫ್ ಟೆಸ್ಟಿಂಗ್ ಆಂಡ್ ಲ್ಯಾಬೊರೇಟರಿ (ಎನ್‌ಎಬಿಎಲ್)ಯಿಂದ ಮಾನ್ಯತೆ ಪಡೆದ ಖಾಸಗಿ ಪ್ರಯೋಗಾಲಯಗಳಿಗೆ ಮಾದರಿ ಕಳುಹಿಸಿ ವರದಿ ಪಡೆದುಕೊಂಡಿದ್ದೇವೆ. ಎಥೆನಾಲ್ ಮಿಶ್ರಣ ಪತ್ತೆ ಹಚ್ಚಲು ಸಾಮಾನ್ಯ ಜ್ಞಾನ ಸಾಲುವುದಿಲ್ಲ. ಅದೊಂದು ರಾಕೆಟ್ ಸೈನ್ಸ್. ನಿಮಿಂದ ಸಾಧ್ಯವಿಲ್ಲ ಎಂದು ಹೇಳುತ್ತಿರುವ ತೈಲ ಕಂಪನಿಗಳು, ನಮ ವರದಿ ಪ್ರಕಟಗೊಂಡ ಬಳಿಕ ಆನ್‌ಲೈನ್‌ನಲ್ಲಿ ಸಿಗುವ 600 ರೂ. ಬೆಲೆಯ ಹೈಡ್ರೋ ಮೀಟರ್ ಅನ್ನು ಬಳಸಿ ಕೆಲವು ಬಂಕ್‌ಗಳಲ್ಲಿ ಸ್ಥಳದಲ್ಲೇ ತಪಾಸಣೆ ನಡೆಸುತ್ತಿದ್ದು, ಎಥೆನಾಲ್ ಮಿಶ್ರಣ ಎಷ್ಟು ಎಂದು ಘೋಷಣೆ ಮಾಡುತ್ತಿವೆ. ತೈಲ ಕಂಪನಿಗಳ ಪರವಾಗಿ ಬಂಕ್ ಮಾಲೀಕರಿಂದಲೂ ಹೇಳಿಕೆ ಕೊಡಿಸಲಾಗುತ್ತಿದೆ ಎಂದು ರಿಜ್ವಾನ್ ಅರ್ಷದ್ ದೂರಿದರು

ಮತಾಂತರ ನಿಷೇಧ ಕಾಯ್ದೆ ಹಿಂಪಡೆಯುವ - ದುರ್ಬಲಗೊಳಿಸುವ ಪ್ರಯತ್ನಕ್ಕೆ ಬಿಜೆಪಿ ವಿರೋಧ: ರವಿಕುಮಾರ್ ಎಚ್ಚರಿಕೆ



ಬೆಂಗಳೂರು, ನ.9: ರಾಜ್ಯ ಸರ್ಕಾರವು ಮತಾಂತರ ನಿಷೇಧ ಕಾಯ್ದೆಯನ್ನು ಹಿಂಪಡೆಯಲು ಅಥವಾ ಅದರ ನಿಯಮಗಳನ್ನು ದುರ್ಬಲಗೊಳಿಸಲು ಮುಂದಾದರೆ ಉಗ್ರ ಹೋರಾಟ ನಡೆಸುವುದಾಗಿ ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಲವಂತದ ಹಾಗೂ ವಂಚನೆಯ ಮೂಲಕ ನಡೆಯುವ ಮತಾಂತರವನ್ನು ತಡೆಯುವ ಸದುದ್ದೇಶದಿಂದ ಬಿಜೆಪಿ ಸರ್ಕಾರ ಈ ಕಾಯ್ದೆಯನ್ನು ಜಾರಿಗೆ ತಂದಿತ್ತು ಎಂದು ಹೇಳಿದರು.

ಧರ್ಮದ ಪ್ರಚಾರಕ್ಕೂ, ಬಲವಂತದ ಮತಾಂತರಕ್ಕೂ ಬಹಳ ವ್ಯತ್ಯಾಸವಿದೆ. ಸಂವಿಧಾನವು ಧರ್ಮದ ಪ್ರಚಾರಕ್ಕೆ ಅವಕಾಶ ನೀಡಿದೆಯೇ ಹೊರತು, ಬಲವಂತದ ಅಥವಾ ವಂಚನೆಯ ಮೂಲಕ ಮತ್ತೊಂದು ಧರ್ಮಕ್ಕೆ ಮತಾಂತರ ಮಾಡುವುದಕ್ಕೆ ಅವಕಾಶ ನೀಡಿಲ್ಲ ಎಂದು ರವಿಕುಮಾರ್ ಸ್ಪಷ್ಟಪಡಿಸಿದರು. ಕ್ರೈಸ್ತ ಧರ್ಮಪ್ರಚಾರಕ ಸಂಘಟನೆಗಳ ಒತ್ತಡಕ್ಕೆ ಮಣಿದು ಕಾಂಗ್ರೆಸ್ ಸರ್ಕಾರ ಮತಾಂತರ ನಿಷೇಧ ಕಾಯ್ದೆಯನ್ನು ಹಿಂಪಡೆಯಲು ಮುಂದಾಗಿದೆ ಎಂದು ಅವರು ಆರೋಪಿಸಿದರು.

ಮತಾಂತರ ನಿಷೇಧ ಕಾಯ್ದೆಯನ್ನು ದುರ್ಬಲಗೊಳಿಸುವ ಅಥವಾ ಹಿಂಪಡೆಯುವ ಯಾವುದೇ ಪ್ರಯತ್ನವು ಹಿಂದೂ ಸಮಾಜದ ಒಗ್ಗಟ್ಟಿಗೆ ಧಕ್ಕೆ ಉಂಟುಮಾಡಲಿದೆ. ಅಂತರರಾಷ್ಟ್ರೀಯ ಧರ್ಮಪ್ರಚಾರಕ ಶಕ್ತಿಗಳ ಬೆಂಬಲ ಹೊಂದಿರುವ ಮತಾಂತರದ ಜಾಲವು ವ್ಯಾಪಕವಾಗಿ ಕಾರ್ಯಾಚರಿಸುವ ಮೂಲಕ ಹಿಂದೂ ಸಮಾಜಕ್ಕೆ ಗಂಭೀರ ಸವಾಲು ಒಡ್ಡಬಹುದು ಎಂದು ಅವರು ಆತಂಕ ವ್ಯಕ್ತಪಡಿಸಿದರು. ಮತಾಂತರ ನಿಷೇಧ ಕಾಯ್ದೆಯನ್ನು ಹಿಂಪಡೆಯುವ ಅಥವಾ ದುರ್ಬಲಗೊಳಿಸುವ ಯಾವುದೇ ಪ್ರಯತ್ನವನ್ನು ಬಿಜೆಪಿ ಹಲ್ಲುಕಚ್ಚಿ ವಿರೋಧಿಸಲಿದೆ. ಈ ವಿಚಾರವಾಗಿ ವಿಶ್ವ ಹಿಂದೂ ಪರಿಷತ್ ಸರ್ಕಾರಕ್ಕೆ ಬರೆದಿರುವ ಪತ್ರವನ್ನು ಉಲ್ಲೇಖಿಸಿದ ಅವರು, ಈ ಹೋರಾಟಕ್ಕೆ ಬಿಜೆಪಿ ಅಗತ್ಯವಾದ ಸಂಘಟನಾತ್ಮಕ ಹಾಗೂ ನೈತಿಕ ಬೆಂಬಲ ನೀಡಲಿದೆ ಎಂದು ತಿಳಿಸಿದರು.

ಇದೇ ವೇಳೆ, ಪೆಟ್ರೋಲ್‌ನಲ್ಲಿ ಎಥೆನಾಲ್ ಮಿಶ್ರಣವನ್ನು ಕೇಂದ್ರ ಸರ್ಕಾರ ಹೆಚ್ಚಿಸುತ್ತಿದೆ ಎಂಬ ಕಾಂಗ್ರೆಸ್ ಆರೋಪಕ್ಕೆ ಪ್ರತಿಕ್ರಿಯಿಸಿದ ರವಿಕುಮಾರ್, ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಜನರು ಎದುರಿಸುತ್ತಿರುವ ಸಂಕಷ್ಟದಿಂದ ಗಮನವನ್ನು ಬೇರೆಡೆಗೆ ಸೆಳೆಯಲು ಕಾಂಗ್ರೆಸ್ ಸರ್ಕಾರ ಕೇಂದ್ರದ ಮೇಲೆ ಆರೋಪ ಮಾಡುತ್ತಿದೆ ಎಂದು ಹೇಳಿದರು.

ಮಹಿಳಾ ಜನಪ್ರತಿನಿಧಿಗಳ ಒಗ್ಗೂಡಿಸುವ ಸಿಡಬ್ಲ್ಯುಪಿ ಸಮ್ಮೇಳನಕ್ಕೆ ಬೆಂಗಳೂರು ಸಜ್ಜು


ನ.17, 18ರಂದು ಕಾರ್ಯಕ್ರಮ: ಲೋಕಸಭಾಧ್ಯಕ್ಷ ಓಂ ಬಿರ್ಲಾ, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉದ್ಘಾಟನೆ

ಬೆಂಗಳೂರು, ನ.9: ದೇಶದ ವಿವಿಧ ರಾಜ್ಯಗಳ ಮಹಿಳಾ ಜನಪ್ರತಿನಿಧಿಗಳನ್ನು ಒಂದೇ ವೇದಿಕೆಯಡಿ ತರುವ ಐತಿಹಾಸಿಕ ರಾಷ್ಟ್ರೀಯ ಸಮ್ಮೇಳನಕ್ಕೆ ಬೆಂಗಳೂರು ಸಾಕ್ಷಿಯಾಗಲಿದೆ. ಕಾಮನ್‌ವೆಲ್ತ್ ಮಹಿಳಾ ಸಂಸದೀಯ ವಿಭಾಗದ ಭಾರತ ಪ್ರಾದೇಶಿಕ ಘಟಕದ ವಿಶೇಷ ಸಮ್ಮೇಳನವನ್ನು ನವೆಂಬರ್ 17 ಮತ್ತು 18ರಂದು ಬೆಂಗಳೂರಿನಲ್ಲಿ ಆಯೋಜಿಸಲಾಗಿದ್ದು, ಈ ಸ್ವರೂಪದ ಸಮ್ಮೇಳನ ಭಾರತದಲ್ಲಿ ಮೊದಲ ಬಾರಿಗೆ ಬೆಂಗಳೂರಿನಲ್ಲಿ ನಡೆಯುತ್ತಿರುವುದು ವಿಶೇಷವಾಗಿದೆ ಎಂದು ವಿಧಾನಸಭೆಯ ಸಭಾಧ್ಯಕ್ಷ ಜಿ.ಎಸ್. ಪಾಟೀಲ್ ಹಾಗೂ ವಿಧಾನಪರಿಷತ್ತಿನ ಸಭಾಪತಿ ಸಲೀಂ ಅಹ್ಮದ್ ತಿಳಿಸಿದರು.

ಜಂಟಿ ಸುದ್ದಿಗೋಷ್ಠಿಯಲ್ಲಿ ಸಮ್ಮೇಳನದ ವಿವರ ಪ್ರಕಟಿಸಿದ ಅವರು, ನವೆಂಬರ್ 17ರಂದು ಲೋಕಸಭಾಧ್ಯಕ್ಷ ಓಂ ಬಿರ್ಲಾ ಹಾಗೂ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಮ್ಮೇಳನಕ್ಕೆ ಚಾಲನೆ ನೀಡಲಿದ್ದಾರೆ.

ಭಾರತ ಸಂಸತ್ತು ಹಾಗೂ ಕರ್ನಾಟಕ ವಿಧಾನಮಂಡಲದ ಸಮನ್ವಯದಲ್ಲಿ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಸಹಕಾರದೊಂದಿಗೆ ಎರಡು ದಿನಗಳ ಈ ಸಮ್ಮೇಳನವನ್ನು ಆಯೋಜಿಸಲಾಗುತ್ತಿದೆ ಎಂದು ತಿಳಿಸಿದರು.

ದೇಶದ ವಿವಿಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ಮಹಿಳಾ ಸಂಸದರು, ಮಹಿಳಾ ಸಭಾಧ್ಯಕ್ಷರು, ಉಪಸಭಾಧ್ಯಕ್ಷರು, ಶಾಸಕಿಯರು, ವಿಧಾನಪರಿಷತ್ ಸದಸ್ಯರು ಸೇರಿದಂತೆ 150 ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆಯಿದೆ. ಕಾಮನ್‌ವೆಲ್ತ್ ಸಂಸದೀಯ ಸಂಘದ ಅಂತಾರಾಷ್ಟ್ರೀಯ ಪ್ರತಿನಿಧಿಗಳೂ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.



ದೇಶದ ವಿವಿಧ ರಾಜ್ಯಗಳ ಮಹಿಳಾ ಜನಪ್ರತಿನಿಧಿಗಳನ್ನು ಒಂದೇ ವೇದಿಕೆಗೆ ಕರೆತರುತ್ತಿರುವ ಈ ಸಮ್ಮೇಳನವು ಭಾರತದ ಸಂಸದೀಯ ಇತಿಹಾಸದಲ್ಲಿ ಮಹತ್ವದ ಹೆಜ್ಜೆಯಾಗಲಿದೆ. ಪ್ರಜಾಪ್ರಭುತ್ವದ ನಿಜವಾದ ಶಕ್ತಿ ಮಹಿಳೆಯರ ಪರಿಣಾಮಕಾರಿ ಪಾಲ್ಗೊಳ್ಳುವಿಕೆಯಲ್ಲಿದೆ. ಮಹಿಳೆಯರ ಪ್ರಾತಿನಿಧ್ಯ ಹೆಚ್ಚುವುದರ ಜೊತೆಗೆ ಶಾಸನ ರಚನೆ ಮತ್ತು ಆಡಳಿತದಲ್ಲಿ ಅವರ ನಾಯಕತ್ವವೂ ಬಲಗೊಳ್ಳಬೇಕು. ಈ ನಿಟ್ಟಿನಲ್ಲಿ ಬೆಂಗಳೂರು ಸಮ್ಮೇಳನವು ಹೊಸ ವಿಚಾರಗಳು, ಉತ್ತಮ ಶಾಸನ ಪದ್ಧತಿಗಳು ಹಾಗೂ ಅನುಭವಗಳ ವಿನಿಮಯಕ್ಕೆ ಮಹತ್ವದ ವೇದಿಕೆಯಾಗಲಿದೆ.

-ಜಿ.ಎಸ್.ಪಾಟೀಲ್ | ವಿಧಾನಸಭಾಧ್ಯಕ್ಷ



ಡಿಜಿಟಲ್ ತಂತ್ರಜ್ಞಾನ ಮಹಿಳೆಯರಿಗೆ ಹೊಸ ಅವಕಾಶಗಳನ್ನು ಸೃಷ್ಟಿಸಿದೆ. ಆದರೆ ಸೈಬರ್ ಕಿರುಕುಳ, ಆನ್‌ಲೈನ್ ದೌರ್ಜನ್ಯ, ಡೀಪ್‌ಫೇಕ್ ಹಾಗೂ ವೈಯಕ್ತಿಕ ಮಾಹಿತಿಯ ದುರ್ಬಳಕೆಯಂತಹ ಗಂಭೀರ ಸವಾಲುಗಳನ್ನು ಎದುರಿಸಬೇಕಾಗಿದೆ. ವಿಶೇಷವಾಗಿ ಸಾರ್ವಜನಿಕ ಜೀವನದಲ್ಲಿರುವ ಮಹಿಳೆಯರ ಡಿಜಿಟಲ್ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡುವ ಅಗತ್ಯವಿದೆ. ಈ ಕುರಿತು ದೇಶದ ಮಹಿಳಾ ಜನಪ್ರತಿನಿಧಿಗಳು ಒಂದೇ ವೇದಿಕೆಯಲ್ಲಿ ಚರ್ಚಿಸುವುದು ಅತ್ಯಂತ ಪ್ರಸ್ತುತವಾಗಿದೆ.

-ಸಲೀಂ ಅಹ್ಮದ್ | ವಿಧಾನ ಪರಿಷತ್ ಸಭಾಪತಿ


ಸಮ್ಮೇಳನದ ಉದ್ದೇಶ

ಸೈಬರ್ ಸುರಕ್ಷತೆ, ನೂತನ ಮಹಿಳಾ ಜನಪ್ರತಿನಿಧಿಗಳ ಮಾರ್ಗದರ್ಶನಕ್ಕೆ ಒತ್ತು ನೀಡುತ್ತಿದ್ದು, ಭದ್ರ ಬುನಾದಿ, ಸಶಕ್ತ ಧ್ವನಿಗಳು: ನೂತನ ಮಹಿಳಾ ಜನಪ್ರತಿನಿಧಿಗಳಿಗೆ ಸೈಬರ್ ಸುರಕ್ಷತೆ ಮತ್ತು ಮಾರ್ಗದರ್ಶನದ ಹಾದಿಗಳು ಎಂಬ ಪ್ರಮುಖ ಆಶಯದಡಿ ಸಮ್ಮೇಳನ ನಡೆಯಲಿದೆ. ಡಿಜಿಟಲ್ ಯುಗದಲ್ಲಿ ಮಹಿಳಾ ಜನಪ್ರತಿನಿಧಿಗಳ ಸುರಕ್ಷತೆಯನ್ನು ಖಾತ್ರಿಪಡಿಸುವುದು ಹಾಗೂ ಮೊದಲ ಬಾರಿಗೆ ಶಾಸನಸಭೆಗಳಿಗೆ ಆಯ್ಕೆಯಾಗಿರುವ ಮಹಿಳಾ ಜನಪ್ರತಿನಿಧಿಗಳಿಗೆ ಅಗತ್ಯವಾದ ಮಾರ್ಗದರ್ಶನ ಮತ್ತು ಸಾಂಸ್ಥಿಕ ಬೆಂಬಲ ಒದಗಿಸುವ ಕುರಿತು ಚರ್ಚಿಸುವುದು ಸಮ್ಮೇಳನದ ಪ್ರಮುಖ ಉದ್ದೇಶವಾಗಿದೆ.

ನೂತನ ಮಹಿಳಾ ಜನಪ್ರತಿನಿಧಿಗಳಿಗೆ ಅನುಭವಿಗಳ ಮಾರ್ಗದರ್ಶನ ಒದಗಿಸುವುದು ಸಮ್ಮೇಳನದ ಮತ್ತೊಂದು ಪ್ರಮುಖ ವಿಷಯವಾಗಿದೆ. ಮೊದಲ ಬಾರಿಗೆ ಶಾಸನಸಭೆ ಪ್ರವೇಶಿಸುವ ಮಹಿಳಾ ಜನಪ್ರತಿನಿಧಿಗಳಿಗೆ ಸದನದ ಕಾರ್ಯವಿಧಾನ, ಕಾನೂನು ರಚನೆ, ನೀತಿ ನಿರೂಪಣೆ, ಸಂಸದೀಯ ಚರ್ಚೆಗಳಲ್ಲಿ ಪರಿಣಾಮಕಾರಿ ಪಾಲ್ಗೊಳ್ಳುವಿಕೆ, ನಾಯಕತ್ವ ಕೌಶಲ್ಯ ಹಾಗೂ ಶಾಸನಸಭೆಗಳ ಕಾರ್ಯನಿರ್ವಹಣೆಯಲ್ಲಿ ತಂತ್ರಜ್ಞಾನದ ಬಳಕೆಯ ಕುರಿತು ಅನುಭವಿ ಜನಪ್ರತಿನಿಧಿಗಳಿಂದ ಮಾರ್ಗದರ್ಶನ ದೊರೆಯುವಂತೆ ಮಾಡುವ ಮಾರ್ಗೋಪಾಯಗಳ ಬಗ್ಗೆ ವಿಚಾರ ವಿನಿಮಯ ನಡೆಯಲಿದೆ. ಸಮ್ಮೇಳನದ ಪೂರ್ವಭಾವಿಯಾಗಿ ನವೆಂಬರ್ 14ರಂದು ಬೆಂಗಳೂರಿನಲ್ಲಿ ವಿಶೇಷ ಕರ್ಟನ್‌ರೈಸರ್ ಕಾರ್ಯಕ್ರಮ ಆಯೋಜಿಸಲಾಗಿದೆ.

ಬನ್ನೇರುಘಟ್ಟ ಉದ್ಯಾನವನದಲ್ಲಿ ಪ್ರವಾಸಿಗರ ಸ್ನೇಹಿ ಅಭಿವೃದ್ಧಿ ಕಾಮಗಾರಿ 38 ಕೋಟಿ ವೆಚ್ಚದ ಯೋಜನೆಗೆ ಸಚಿವ ರಾಮಲಿಂಗಾರೆಡ್ಡಿ ಚಾಲನೆ

ಬೆಂಗಳೂರು, ನ.9: ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ ವನ್ಯಜೀವಿ ಸಂರಕ್ಷಣೆ, ಪ್ರಾಣಿಗಳ ಕಲ್ಯಾಣ ಹಾಗೂ ಪ್ರವಾಸಿಗರಿಗೆ ಅಗತ್ಯವಿರುವ ಸೌಲಭ್ಯಗಳನ್ನು ಮತ್ತಷ್ಟು ಅಭಿವೃದ್ಧಿಪಡಿಸುವ ಉದ್ದೇಶದಿಂದ 38 ಕೋಟಿ ರೂ. ವೆಚ್ಚದ ವಿವಿಧ ಕಾಮಗಾರಿಗಳಿಗೆ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಸಚಿವ ರಾಮಲಿಂಗಾ ರೆಡ್ಡಿ ಸೋಮವಾರ ಚಾಲನೆ ನೀಡಿದರು.



ಈ ಮೇಲಿನ ಎಲ್ಲಾ ಕಾರ್ಯಕ್ರಮದಲ್ಲಿ ಶಾಸಕರಾದ ಬಿ.ಶಿವಣ್ಣ, ಎಂ. ಕೃಷ್ಣಪ್ಪ, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಬಿ.ಪಿ. ರವಿ, ಅರಣ್ಯ ಪಡೆ ಮುಖ್ಯಸ್ಥರು, ಇತರ ಅರಣ್ಯಾಧಿಕಾರಿಗಳು ಉಪಸ್ಥಿತರಿದ್ದರು.

ಯಾವ್ಯಾವ ಕಾಮಗಾರಿಗಳು?

1) ಪ್ರವಾಸಿಗರ ಸವಾರಿಗೆ ಅನುಕೂಲವಾಗಲು ನೂತನ ಎಲೆಕ್ಟ್ರಿಕ್ ವಾಹನಗಳಿಗೆ ಚಾಲನೆ

2) ಆಡಳಿತ ಕಚೇರಿ "ಅಡವಿ" ಕಟ್ಟಡ ಉದ್ಘಾಟನೆ

3) ಲೈವ್ ಫೀಡ್ ಘಟಕ, ಉದ್ಘಾಟನೆ

4) ಕೇಂದ್ರೀಯ ನರ್ಸರಿ ಉದ್ಘಾಟನೆ

5) ನೂತನ ಕ್ವಾರಂಟೈನ್ ಬ್ಲಾಕ್‌ಗೆ ಚಾಲನೆ

6) ಉದ್ಯಾನವನದ ನವೀಕೃತ ಮುಖ್ಯ ಪ್ರವೇಶ ದ್ವಾರ, ಉದ್ಘಾಟನೆ

7) ಹೊಸದಾಗಿ ಝೂ ಶಾಪ್ ಪ್ರಾರಂಭ

8) ಸುವರ್ಣಮುಖಿ ಕೆಫೆಗೆ ಚಾಲನೆ

9) ಅರಣ್ಯ ಸಿಬ್ಬಂದಿಗಳ ವಸತಿಗೃಹಗಳ ಉದ್ಘಾಟನೆ

10) ವಿವಿಧ ಪ್ರಾಣಿ–ಪಕ್ಷಿಗಳ ಆವರಣಗಳ ಉದ್ಘಾಟನೆ.

11) ಸಫಾರಿ ಪ್ರದೇಶಕ್ಕೆ ಭೇಟಿ ನೀಡಿ, ಆನೆಗಳ ಆರೋಗ್ಯ, ಆರೈಕೆ, ಕಲ್ಯಾಣ ಹಾಗೂ ನಿರ್ವಹಣೆಗೆ ಮೀಸಲಾಗಿರುವ ಸುವರ್ಣ ಆನೆ ಆರೈಕೆ ಕೇಂದ್ರ"ದ ವೀಕ್ಷಣಾ ಗೋಪುರವನ್ನು ಉದ್ಘಾಟಿಸಿದರು.

12) ಸಫಾರಿ ವೀಕ್ಷಣೆಯ ಮೂಲಕ ಜೈವಿಕ ಉದ್ಯಾನವನದಲ್ಲಿ ಕೈಗೊಳ್ಳಲಾಗುತ್ತಿರುವ ವನ್ಯಜೀವಿ ಸಂರಕ್ಷಣೆ ಹಾಗೂ ನಿರ್ವಹಣಾ ಚಟುವಟಿಕೆಗಳನ್ನು ವೀಕ್ಷಣೆ.

ಜನವರಿಯಲ್ಲಿ ಜಿ.ಪಂ, ತಾ.ಪಂ.ಚುನಾವಣೆ: ಸಿದ್ಧತೆ ತೀವ್ರಗೊಳಿಸಿದ ರಾಜ್ಯ ಚುನಾವಣಾ ಆಯೋಗ

ಬೆಂಗಳೂರು, ನ.9: ಮುಂಬರುವ ಜನವರಿಯಲ್ಲಿ ಕರ್ನಾಟಕದ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆ ನಡೆಸುವ ಸಾಧ್ಯತೆ ಹಿನ್ನೆಲೆಯಲ್ಲಿ ರಾಜ್ಯ ಚುನಾವಣಾ ಆಯೋಗ ಚುನಾವಣಾ ಸಿದ್ಧತೆಗಳನ್ನು ಚುರುಕುಗೊಳಿಸಿದೆ.

ಈ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಚುನಾವಣಾಧಿಕಾರಿಗಳು ಹಾಗೂ ಸಹಾಯಕ ಚುನಾವಣಾಧಿಕಾರಿಗಳ ನೇಮಕಾತಿ ಪ್ರಕ್ರಿಯೆ ಆರಂಭಿಸುವಂತೆ ಆಯೋಗ ನಿರ್ದೇಶನ ನೀಡಿದೆ. ರಾಜ್ಯ ಚುನಾವಣಾ ಆಯೋಗ ಶನಿವಾರ ಹೊರಡಿಸಿರುವ ನಿರ್ದೇಶನದಂತೆ, ಜಿಲ್ಲಾ ಪಂಚಾಯಿತಿ ಕ್ಷೇತ್ರಗಳಿಗೆ ಸಹಾಯಕ ಆಯುಕ್ತರ ಹುದ್ದೆಯ ಅಥವಾ ಅದಕ್ಕೆ ಸಮಾನ ಶ್ರೇಣಿಯ ಅಧಿಕಾರಿಗಳನ್ನು ಚುನಾವಣಾಧಿಕಾರಿಗಳಾಗಿ ನೇಮಿಸಬೇಕು. ತಾಲೂಕು ಪಂಚಾಯಿತಿ ಕ್ಷೇತ್ರಗಳಿಗೆ ತಹಸೀಲ್ದಾರ್ ಅಥವಾ ಸಮಾನ ಶ್ರೇಣಿಯ ಅಧಿಕಾರಿಗಳನ್ನು ಚುನಾವಣಾಧಿಕಾರಿಗಳಾಗಿ ನೇಮಿಸಲು ಸೂಚಿಸಲಾಗಿದೆ.

ಜಿಲ್ಲಾಧಿಕಾರಿಗಳು ಪ್ರಾಥಮಿಕ ಸಭೆಗಳನ್ನು ನಡೆಸಿ, ನೇಮಕಗೊಳ್ಳುವ ಚುನಾವಣಾಧಿಕಾರಿಗಳು ಹಾಗೂ ಸಹಾಯಕ ಚುನಾವಣಾಧಿಕಾರಿಗಳಿಗೆ ಅಗತ್ಯ ತರಬೇತಿ ನೀಡಬೇಕು. ನೇಮಕಾತಿಗೆ ಸಂಬಂಧಿಸಿದ ಪ್ರಸ್ತಾವನೆ ಹಾಗೂ ಆರ್‌ಓ–ಎಆರ್‌ಓ ಪಟ್ಟಿಯನ್ನು ನವೆಂಬರ್ 16ರೊಳಗೆ ರಾಜ್ಯ ಚುನಾವಣಾ ಆಯೋಗಕ್ಕೆ ಸಲ್ಲಿಸಬೇಕು ಎಂದು ಸೂಚಿಸಲಾಗಿದೆ. ಕರ್ನಾಟಕ ಪಂಚಾಯತ್ ರಾಜ್ (ಚುನಾವಣೆಗಳ ನಡವಳಿಕೆ) ನಿಯಮಗಳು, 1993ರ ನಿಯಮ 6ರನ್ವಯ ಸೂಕ್ತ ಅಧಿಕಾರಿಗಳನ್ನು ಗುರುತಿಸಿ ಚುನಾವಣಾ ಕರ್ತವ್ಯಕ್ಕೆ ನಿಯೋಜಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಪ್ರತಿ ತಾಲೂಕಿಗೆ ಒಬ್ಬ ಆರ್‌ಓ ನೇಮಕಕ್ಕೆ ಸೂಚನೆ

ಜಿಲ್ಲಾ ಪಂಚಾಯಿತಿ ಚುನಾವಣೆಗೆ ಪ್ರತಿ ತಾಲೂಕಿಗೆ ಒಬ್ಬ ಸಹಾಯಕ ಆಯುಕ್ತರ ಶ್ರೇಣಿಯ ಅಧಿಕಾರಿಯನ್ನು ಆರ್‌ಒಗಳನ್ನಾಗಿ ನೇಮಿಸಬೇಕು. 10ಕ್ಕಿಂತ ಹೆಚ್ಚು ಜಿಲ್ಲಾ ಪಂಚಾಯಿತಿ ಕ್ಷೇತ್ರಗಳಿರುವ ತಾಲೂಕುಗಳಲ್ಲಿ ಅಗತ್ಯವಿದ್ದರೆ ಇಬ್ಬರು ಆರ್‌ಒಗಳನ್ನು ನೇಮಿಸಬಹುದಾಗಿದೆ. ಸಂಬಂಧಪಟ್ಟ ತಾಲೂಕಿನ ತಹಸೀಲ್ದಾರ್ ಹೊರತುಪಡಿಸಿ, ತಹಸೀಲ್ದಾರ್ ಶ್ರೇಣಿಯ ಅಧಿಕಾರಿಗಳನ್ನು ಎಆರ್‌ಒಗಳಾಗಿ ನೇಮಿಸಲು ಸೂಚಿಸಲಾಗಿದೆ. ತಾಲೂಕು ಪಂಚಾಯಿತಿ ಚುನಾವಣೆಯಲ್ಲಿ ಪ್ರತಿ 15 ಕ್ಷೇತ್ರಗಳಿಗೆ ಒಬ್ಬ ತಹಸೀಲ್ದಾರ್ ಅಥವಾ ಸಮಾನ ಶ್ರೇಣಿಯ ಅಧಿಕಾರಿಯನ್ನು ಆರ್‌ಒಗಳಾಗಿ ನೇಮಿಸಬೇಕು. ಉಪ ತಹಸೀಲ್ದಾರ್ ಅಥವಾ ಸಮಾನ ಶ್ರೇಣಿಯ ಅಧಿಕಾರಿಗಳನ್ನು ಎಆರ್‌ಒಗಳಾಗಿ ನಿಯೋಜಿಸಬೇಕು.

ಮತಪೆಟ್ಟಿಗೆಗಳು ಮರುಬಳಕೆಗೆ ಯೋಗ್ಯ

ಮೂಲಗಳ ಪ್ರಕಾರ, ರಾಜ್ಯ ಚುನಾವಣಾ ಆಯೋಗ ರಾಜ್ಯಾದ್ಯಂತ ಲಭ್ಯವಿರುವ ಮತಪೆಟ್ಟಿಗೆಗಳ ಪರಿಶೀಲನೆ ಮತ್ತು ಲೆಕ್ಕಮಾಡುವ ಪ್ರಕ್ರಿಯೆ ಪೂರ್ಣಗೊಳಿಸಿದೆ. ಸುಮಾರು 80 ಕೋಟಿಗೂ ಅಧಿಕ ಮೌಲ್ಯದ ಮತಪೆಟ್ಟಿಗೆಗಳು ಮರುಬಳಕೆಗೆ ಯೋಗ್ಯಸ್ಥಿತಿಯಲ್ಲಿವೆ ಎಂದು ತಿಳಿದುಬಂದಿದೆ. ಇದರ ಜೊತೆಗೆ, ಬ್ಯಾಲೆಟ್ ಪೇಪರ್ ಮೂಲಕ ಚುನಾವಣೆ ನಡೆಸಲು ಅಗತ್ಯವಿರುವ ಹೆಚ್ಚುವರಿ ಮತಪೆಟ್ಟಿಗೆಗಳು ಹಾಗೂ ಇತರ ಚುನಾವಣಾ ಸಾಮಗ್ರಿಗಳ ಖರೀದಿಗಾಗಿ ರಾಜ್ಯ ಸರ್ಕಾರ ಇತ್ತೀಚೆಗೆ ರಾಜ್ಯ ಚುನಾವಣಾ ಆಯೋಗಕ್ಕೆ 125 ಕೋಟಿ ಬಿಡುಗಡೆ ಮಾಡಿದೆ ಎನ್ನಲಾಗಿದೆ. ಒಟ್ಟಿನಲ್ಲಿ, ಜನವರಿ 2027ರ ಜಿಲ್ಲಾ ಪಂಚಾಯಿತಿ ಮತ್ತು ತಾಲೂಕು ಪಂಚಾಯಿತಿ ಚುನಾವಣೆಗಳ ಸಾಧ್ಯತೆಯನ್ನು ಗಮನದಲ್ಲಿಟ್ಟುಕೊಂಡು ಅಧಿಕಾರಿಗಳ ನೇಮಕ, ತರಬೇತಿ, ಮತಪೆಟ್ಟಿಗೆಗಳ ಸಿದ್ಧತೆ ಹಾಗೂ ಚುನಾವಣಾ ಸಾಮಗ್ರಿಗಳ ವ್ಯವಸ್ಥೆ ಸೇರಿದಂತೆ ಹಲವು ಹಂತಗಳಲ್ಲಿ ರಾಜ್ಯ ಚುನಾವಣಾ ಆಯೋಗ ಸಿದ್ಧತೆ ಆರಂಭಿಸಿದೆ.

ಬೆಲೆ ಏರಿಕೆಗೆ ವಿರೋಧಿಸಿ ಸರ್ಕಾರದ ವಿರುದ್ಧ ನಾಳೆ ಬಿಜೆಪಿ ಪ್ರತಿಭಟನೆ: ಬಿ.ವೈ.ವಿಜಯೇಂದ್ರ

ಬೆಂಗಳೂರು, ನ.9: ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಾಗಿನಿಂದ ನಿರಂತರವಾಗಿ ದರ ಏರಿಕೆ ಮಾಡಲಾಗುತ್ತಿದೆ. ಸರಕಾರದ ಅವೈಜ್ಞಾನಿಕ ಬೆಲೆ ಏರಿಕೆ ಖಂಡಿಸಿ ನ.11ರಂದು ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಸರಕಾರದ ಅವೈಜ್ಞಾನಿಕ ಬೆಲೆ ಏರಿಕೆಯನ್ನು ಖಂಡಿಸಿ ಬಿಜೆಪಿ ನಾಡಿನ ಜನರ ಪರವಾಗಿ ಹೋರಾಟ ನಡೆಸಲಿದೆ. ನ.11ರಂದು ಬೆ.10ರಿಂದ ಸಂಜೆ 6ರವರೆಗೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಒಂದು ದಿನದ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ರಾಜ್ಯದ ಬಿಜೆಪಿ ಶಾಸಕರು, ಸಂಸದರು, ವಿಧಾನ ಪರಿಷತ್ ಸದಸ್ಯರು, ಮಾಜಿ ಚುನಾಯಿತ ಪ್ರತಿನಿಧಿಗಳು, ಚುನಾವಣೆಯಲ್ಲಿ ಸ್ಪರ್ಧಿಸಿದ್ದ ನಾಯಕರು ಹಾಗೂ ಪಕ್ಷದ ರಾಜ್ಯ ಪದಾಧಿಕಾರಿಗಳು ಸೇರಿದಂತೆ ಎಲ್ಲ ಪ್ರಮುಖರು ಪ್ರತಿಭಟನೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಹೇಳಿದರು. ರಾಜ್ಯ ಸರಕಾರಕ್ಕೆ ಜನರ ನೋವನ್ನು ತಲುಪಿಸಿ, ಬೆಲೆ ಏರಿಕೆ ನಿರ್ಧಾರ ಹಿಂಪಡೆಯುವಂತೆ ಎಚ್ಚರಿಕೆ ನೀಡಲಾಗುವುದು. ಇದಾದ ಬಳಿಕ ಜಿಲ್ಲಾ ಕೇಂದ್ರಗಳಲ್ಲಿ ನಡೆಯುತ್ತಿರುವ ಪಾದಯಾತ್ರೆ ಗಳಲ್ಲೂ ಬೆಲೆ ಏರಿಕೆ ವಿರುದ್ಧದ ಹೋರಾಟವನ್ನು ಮುಂದುವರಿಸಲಾಗುವುದು. ರಾಜ್ಯದ ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲೂ ಪ್ರತಿಭಟನೆ ನಡೆಸಲಾಗುವುದು. ಜನಸಾಮಾನ್ಯರು, ಬಡವರು ಮತ್ತು ರೈತರ ಪರವಾಗಿ ಬಿಜೆಪಿ ಯಾವುದೇ ಕಾರಣಕ್ಕೂ ಸುಮ್ಮನೆ ಕೂರುವುದಿಲ್ಲ ಎಂದು ಎಚ್ಚರಿಸಿದರು. ಸಿಎಸ್‌ಆರ್ ನಿಧಿಯ ಮೇಲೆ ಸರಕಾರದ ಅವಲಂಬನೆ ರಾಜ್ಯದ ಕನಿಷ್ಠ 2000 ಸರಕಾರಿ ಶಾಲೆಗಳನ್ನು ಖಾಸಗಿ ಕಂಪನಿಗಳು ದತ್ತು ತೆಗೆದುಕೊಳ್ಳಬೇಕು ಎಂದು ಮುಖ್ಯಮಂತ್ರಿಗಳು ಕರೆ ನೀಡಿದ್ದಾರೆ. ಕಂಪನಿಗಳು ತಮ್ಮ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆಯಲ್ಲಿ

ಎರಡನೇ ಪುಟದಿಂದ

ಅಕ್ರಮ ಮನೆಗಳ ಸಕ್ರಮ ಶುಲ್ಕದಲ್ಲಿ ಶೇ.50 ರಿಯಾಯಿತಿ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿವೇಶನಗಳನ್ನು ಹಂಚಿಕೆ ಮಾಡಿರುವ ನಿವೇಶನಗಳ ಹಿಂಬದಿಯಲ್ಲಿ ಮತ್ತು ಅಕ್ಕಪಕ್ಕದಲ್ಲಿ ಪ್ರಾಧಿಕಾರಕ್ಕೆ ಸೇರಿರುವ ಅಂಚಿನ ಜಾಗಗಳು ಲಭ್ಯವಿದ್ದಲ್ಲಿ, ಅಂಚಿನ ಜಾಗದ ಬಗ್ಗೆ ಹಂಚಿಕೆದಾರರಿಗೆ ಆಸಕ್ತಿಯಿದ್ದಲ್ಲಿ ದಿನಾಂಕ 17.12.2026ರೊಳಗೆ ಅರ್ಜಿಯನ್ನು ಸಲ್ಲಿಸಬಹುದು. 600ಚದರ ಅಡಿವರೆಗೂ ಈ ರೀತಿಯ ಸೈಟ್ ನೀಡಲು ಕಾಯ್ದೆಯಲ್ಲಿ ಅವಕಾಶವಿದ್ದು, ಇದರ ಪ್ರಯೋಜನವನ್ನು ಪಡೆದುಕೊಳ್ಳುವಂತೆ ಅವರು ಮನವಿ ಮಾಡಿದರು.

ಶುದ್ಧ ಕ್ರಯಪತ್ರ ಮೇಳ

ಬಿಡಿಎಯಿಂದ ನಿವೇಶನಗಳನ್ನು ಹಂಚಿಕೆ ಮಾಡಿ, ಗುತ್ತಿಗೆ ಅವಧಿಯು ಮುಕ್ತಾಯವಾಗಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರ ಅನುಕೂಲಕ್ಕಾಗಿ ಶುದ್ಧ ಕ್ರಯಪತ್ರ ನೋಂದಾಯಿಸಿ ಕೊಡಲು ಮೇಳವನ್ನು ಆಯೋಜಿಸಲಾಗಿದೆ. ಹಂಚಿಕೆದಾರರು ನಿವೇಶನದ ದಾಖಲೆಗಳೊಂದಿಗೆ ಡಿ.26ರೊಳಗೆ ಅರ್ಜಿ ಸಲ್ಲಿಸಿದರೆ 60 ದಿನಗಳೊಳಗೆ ನಿಯಮಾನುಸಾರ ಶುದ್ಧ ಕ್ರಯಪತ್ರವನ್ನು ನೋಂದಾಯಿಸಿಕೊಡಲು ಕ್ರಮವಹಿಸಲಾಗುವುದು ಎಂದು ಡಿ.ಕೆ. ಶಿವಕುಮಾರ್ ಹೇಳಿದರು.



ಬೆಂಗಳೂರಿನ ಹೆಬ್ಬಾಳ ಜಂಕ್ಷನ್‌ನಿಂದ ಮೇಖ್ರಿ ಸರ್ಕಲ್‌ವರೆಗೆ ನಿರ್ಮಿಸಲಾಗುತ್ತಿರುವ ಎತ್ತರಿಸಿದ ರಸ್ತೆ (ಎಲಿವೇಟೆಡ್ ರೋಡ್) ಕಾಮಗಾರಿ ನಡೆಯುತ್ತಿರುವ ಸ್ಥಳವನ್ನು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸೋಮವಾರ ಪರಿಶೀಲಿಸಿದರು.

ಐರಿಷ್ ಲೇಖಕ ಆನ್ಸ್ ಕ್ರಿಶ್ಚಿಯನ್ ಆಂಡರ್‌ಸನ್ ಕಥೆಗಳನ್ನು ಮನೋಜ್ಞವಾಗಿ ಅನುವಾದಿಸಿದ ಡಾ.ಕರೀಗೌಡರ ಕೊಡುಗೆ ಅನನ್ಯ: ಡಾ.ಸಿ.ನಾಗಣ್ಣ ಶ್ಲಾಘನೆ

ಬೆಂಗಳೂರು,ನ.9: ಐರಿಷ್ ಲೇಖಕ ಆನ್ಸ್ ಕ್ರಿಶ್ಚಿಯನ್ ಆಂಡರ್‌ಸನ್ ಅವರ ಆಯ್ದ ಕತೆಗಳನ್ನು ಕನ್ನಡಕ್ಕೆ ಅನುವಾದಿಸುವ ಮೂಲಕ ಡಾ. ಕರೀಗೌಡ ಬೀಚನಹಳ್ಳಿ ಕನ್ನಡ ಅನುವಾದ ಸಾಹಿತ್ಯಕ್ಕೆ ಮಹತ್ವದ ಕೊಡುಗೆ ನೀಡಿದ್ದಾರೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಇಂಗ್ಲಿಷ್ ಪ್ರಾಧ್ಯಾಪಕ ಹಾಗೂ ಲೇಖಕ ಡಾ.ಸಿ.ನಾಗಣ್ಣ ಅಭಿಪ್ರಾಯಪಟ್ಟರು.



ಆನ್ಸ್ ಕ್ರಿಶ್ಚಿಯನ್ ಆಂಡರ್‌ಸನ್ ಅವರ ಅನುವಾದ ಕತೆಗಳ ಸಂಕಲನ "ತೆರೆದ ಗಾಳಿ " ಪುಸ್ತಕವನ್ನು ಬೆಂಗಳೂರಿನ ಮಲ್ಲತ್ತಹಳ್ಳಿಯಲ್ಲಿರುವ ಕೇಂದ್ರ ಸಾಹಿತ್ಯ ಅಕಾಡೆಮಿ ಸಭಾಂಗಣದಲ್ಲಿ ಶುಕ್ರವಾರ ಲೋಕಾರ್ಪಣೆ ಮಾಡಿ ಮಾತನಾಡಿದ ಅವರು ಸ್ಕಾಂಡಿನೇವಿಯಾ ದ ಅಪ್ರತಿಮ ಕತೆಗಾರ ಆಂಡರ್‌ಸನ್ ಪ್ರಕೃತಿಯ ಪ್ರತಿಯೊಂದು ವಸ್ತುವಿಗೂ ಬಾಯಿಕೊಟ್ಟು ಮಾತನಾಡಿಸಿದ್ದಾರೆ, ಜನಪದ ಕತೆಗಳ ಶೈಲಿಯಲ್ಲಿ ಇರುವ ಕತೆಗಳನ್ನು ಕತೆಗಾರ ಕರೀಗೌಡ ಬೀಚನಹಳ್ಳಿ ಮೂಲಕತೆಗಳ ಆಶಯಕ್ಕೆ ಧಕ್ಕೆ ಬಾರದಂತೆ ಕನ್ನಡಕ್ಕೆ ಅನುವಾದಿಸಿದ್ದಾರೆ ಎಂದರು.

ಡೆನ್ಮಾರ್ಕ್ ನ ಒಡೆನ್ಸಿ ಯಲ್ಲಿ ಬಡ ಚಮ್ಮಾರನ ಮಗನಾಗಿ ಜನಿಸಿದ ಆಂಡರ್‌ಸನ್, ಕಡುಬಡತನದಲ್ಲಿ ಬೆಳೆದರೂ, ಸ್ಕಾಂಡಿನೇವಿಯಾ ದ ಅತ್ಯುತ್ತಮ ಕತೆಗಾರನಾಗಿ ಹೊರಹೊಮ್ಮಿದವರು, ಬಡತನದ ಬದುಕಿನಲ್ಲಿ ಕಂಡುಂಡ ನೋವನ್ನೇ ಕತೆಗಳನ್ನಾಗಿಸಿದವರು. ನೊಂದವರ ಬದುಕನ್ನು ತಮ್ಮ ಸ್ವಂತಕತೆಗಳಲ್ಲಿ ಲಾಗಾಯ್ತಿನಿಂದಲೂ ಚಿತ್ರಿಸಿರುವ ಕರೀಗೌಡ ಅವರು, ಆಂಡರ್‌ಸನ್ ಕತೆಗಳಿಗೆ ಮಿಡಿದಿರುವ ಪರಿ ಸಹಜವೇ ಆಗಿದೆ ಎಂದು ನಾಗಣ್ಣ ತಿಳಿಸಿದರು.

ಹಳ್ಳಿಗಾಡಿನ ಮನುಷ್ಯರ ಸಂಕಷ್ಟಗಳನ್ನು ಅನನ್ಯವಾಗಿ ಕಡೆದಿಟ್ಟಿರುವ ಕರೀಗೌಡ ಅವರು ಆಂಡರ್‌ಸನ್ ಲೋಕವನ್ನು ಸರಾಗವಾಗಿ ಪ್ರವೇಶಿಸಿ, ಅಪರಂಜಿಗಳನ್ನು ಹೆಕ್ಕಿ ತೆಗೆದು ಕನ್ನಡದ ಓದುಗರಿಗೆ ನೀಡಿದ್ದಾರೆ.ಸಾಹಿತ್ಯದಿಂದ ನಾವು ನಿರೀಕ್ಷಿಸುವ ಒಂದು ದೊಡ್ಡ ಜವಾಬ್ದಾರಿಯನ್ನು ಈ ಕತೆಗಳು ನಿಭಾಯಿಸಿವೆ. ಆಂಡರ್‌ಸನ್ ಜೀವಿಸಿದ್ದ ಭೂಪ್ರದೇಶದಲ್ಲಿ ನಡೆದಾಡಿ, ಆತನ ಚೇತನವನ್ನು ಆವಾಹಿಸಿಕೊಂಡು ಆತನ ಕತೆಗಳನ್ನು ಕನ್ನಡದಲ್ಲಿ ಅನುಸೃಷ್ಟಿ ಮಾಡಿಕೊಟ್ಟ ಡಾ. ಕರೀಗೌಡ ಅವರು ಅಭಿನಂದನಾರ್ಹರು ಎಂದು ನಾಗಣ್ಣ ಹೇಳಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ವಿಭಿನ್ನ ಸಂಸ್ಕೃತಿಗಳ ಕೊಡುಕೊಳ್ಳುವಿಕೆಯಲ್ಲಿ ಅನುವಾದದ ಪಾತ್ರ ಮಹತ್ವದ್ದಾಗಿದೆ ಎಂದರು.ಲೇಖಕಿ ಕುಸುಮ ಅಬ್ಬೂರು, ಕಿ.ರಂ ಪ್ರಕಾಶನದ ಧನಂಜಯ ಸಮಾರಂಭದಲ್ಲಿ ಭಾಗವಹಿಸಿದ್ದರು.

ಕಿ.ರಂ ಪ್ರಕಾಶನ ಪುಸ್ತಕ ಪ್ರಕಟಿಸಿದ್ದು, ಪುಸ್ತಕ ಬಿಡುಗಡೆ ಸಮಾರಂಭ ಆಯೋಜಿಸಿತ್ತು.

ಮನೇಕಾ ಸಂಜಯ್ ಗಾಂಧಿ ವಿರುದ್ಧದ ಪ್ರಕರಣ ರದ್ದುಗೊಳಿಸಲು ಹೈಕೋರ್ಟ್ ನಿರಾಕರಣೆ

ಬೆಂಗಳೂರು, ನ.9: ಮಾಜಿ ಕೇಂದ್ರ ಸಚಿವೆ ಹಾಗೂ ಬಿಜೆಪಿ ನಾಯಕಿ ಮನೇಕಾ ಸಂಜಯ್ ಗಾಂಧಿ ವಿರುದ್ಧ ಬೆಂಗಳೂರಿನ ನ್ಯಾಯಾಲಯದಲ್ಲಿ ನಡೆಯುತ್ತಿರುವ ಕ್ರಿಮಿನಲ್ ಮಾನಹಾನಿ ಪ್ರಕರಣದ ವಿಚಾರಣೆಯನ್ನು ಸಂಪೂರ್ಣವಾಗಿ ರದ್ದುಪಡಿಸಲು ಕರ್ನಾಟಕ ಹೈಕೋರ್ಟ್ ನಿರಾಕರಿಸಿದೆ.



ಪ್ರಕರಣದ ವಿಚಾರಣಾ ನ್ಯಾಯಾಲಯದ ಸಮನ್ಸ್ ಪ್ರಶ್ನಿಸಿ ಸತ್ರ ನ್ಯಾಯಾಲಯಕ್ಕೆ ಕ್ರಿಮಿನಲ್ ರಿವಿಷನ್ ಅರ್ಜಿ ಸಲ್ಲಿಸಲು ಮನೇಕಾ ಗಾಂಧಿಗೆ ಅವಕಾಶ ನೀಡಿರುವ ನ್ಯಾಯಮೂರ್ತಿ ಅನಂತ್ ರಾಮನಾಥ್ ಹೆಗಡೆ ಅವರ ಏಕಸದಸ್ಯ ಪೀಠವು ವಿಚಾರಣಾ ನ್ಯಾಯಾಲಯದ ಸಮನ್ಸ್ ಜಾರಿಗೆ ಎರಡು ವಾರಗಳ ತಡೆ ನೀಡಿದೆ.

ಪ್ರಕರಣದ ದಾಖಲೆಗಳನ್ನು ಪರಿಶೀಲಿಸಿದ ಹೈಕೋರ್ಟ್, 2019ರ ನವೆಂಬರ್ 16ರಂದು ಖಾಸಗಿ ದೂರನ್ನು ವಜಾಗೊಳಿಸಲಾಗಿತ್ತು ಮತ್ತು 2025ರ ಜೂನ್ 30ರಂದು ಸತ್ರ ನ್ಯಾಯಾಲಯವು ಆ ಆದೇಶವನ್ನು ರದ್ದುಗೊಳಿಸಿ ಪ್ರಕರಣವನ್ನು ಮರುಪರಿಗಣನೆಗೆ ಕಳುಹಿಸಿತ್ತು ಎಂಬುದನ್ನು ಗಮನಿಸಿದೆ.

ಸತ್ರ ನ್ಯಾಯಾಲಯ ತನ್ನ ಹಿಂದಿನ ಆದೇಶದಿಂದ ಪ್ರಭಾವಿತವಾಗಿ ಪ್ರಕರಣವನ್ನು ವಸ್ತುನಿಷ್ಠವಾಗಿ ಮರುಪರಿಗಣಿಸುವುದಿಲ್ಲ ಎಂಬ ಅರ್ಜಿದಾರರ ಆತಂಕವನ್ನು ಸೂಕ್ತ ನಿರ್ದೇಶನದ ಮೂಲಕ ಪರಿಹರಿಸಬಹುದು ಎಂದು ಪೀಠ ಅಭಿಪ್ರಾಯಪಟ್ಟಿದೆ.

ಮನೇಕಾ ಗಾಂಧಿ ಸತ್ರ ನ್ಯಾಯಾಲಯದಲ್ಲಿ ಕ್ರಿಮಿನಲ್ ರಿವಿಷನ್ ಅರ್ಜಿ ಸಲ್ಲಿಸಿದರೆ, ಆ ನ್ಯಾಯಾಲಯವು ಪ್ರಕರಣದ ಎಲ್ಲ ಅಂಶಗಳನ್ನು ಸ್ವತಂತ್ರವಾಗಿ ಪರಿಶೀಲಿಸಿ ಕಾನೂನುಬದ್ಧ ಆದೇಶ ಹೊರಡಿಸಬೇಕು ಎಂದು ಹೈಕೋರ್ಟ್ ನಿರ್ದೇಶಿಸಿದೆ.

ಮನೇಕಾ ಗಾಂಧಿ ಪರ ವಕೀಲರು, ಅರ್ಜಿದಾರರು ದೆಹಲಿಯ ನಿವಾಸಿಯಾಗಿದ್ದು, ಹಿರಿಯ ನಾಗರಿಕರಾಗಿದ್ದಾರೆ. ವಿಚಾರಣಾ ನ್ಯಾಯಾಲಯದ ಮುಂದೆ ಹಾಜರಾಗಬೇಕಿರುವ ಹಿನ್ನೆಲೆಯಲ್ಲಿ ಸತ್ರ ನ್ಯಾಯಾಲಯದಲ್ಲಿ ರಿವಿಷನ್ ಅರ್ಜಿ ಸಲ್ಲಿಸಲು ಅವಕಾಶ ನೀಡಬೇಕು ಹಾಗೂ ಅಲ್ಲಿಯವರೆಗೆ ವಿಚಾರಣಾ ನ್ಯಾಯಾಲಯದ ಆದೇಶದ ಜಾರಿಗೆ ತಡೆ ನೀಡಬೇಕು ಎಂದು ಮನವಿ ಮಾಡಿದ್ದರು.

ಈ ಮನವಿಯನ್ನು ಪುರಸ್ಕರಿಸಿದ ಹೈಕೋರ್ಟ್, ವಿಚಾರಣಾ ನ್ಯಾಯಾಲಯದ ಸಮನ್ಸ್ ಜಾರಿಗೆ ಎರಡು ವಾರಗಳ ತಡೆ ನೀಡಿದೆ. ಈ ಅವಧಿಯಲ್ಲಿ ಅರ್ಜಿದಾರರು ಸೂಕ್ತ ಕ್ರಿಮಿನಲ್ ರಿವಿಷನ್ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಿದಲ್ಲಿ ಅದನ್ನು ವಿಚಾರಣೆ ನಡೆಸಿ ಕಾನೂನುಬದ್ಧವಾಗಿ ತೀರ್ಮಾನಿಸಬೇಕು ಎಂದು ಸೂಚಿಸಿದೆ.

ಪ್ರಕರಣದ ಹಿನ್ನೆಲೆ: ಮೈಸೂರಿನ ಎಸ್. ಕೆ. ಮಿತ್ತಲ್ ಅವರು ಭಾರತೀಯ ದಂಡ ಸಂಹಿತೆಯ ಸೆಕ್ಷನ್ 499 ಮತ್ತು 500ರ ಅಡಿಯಲ್ಲಿ ಮನೇಕಾ ಗಾಂಧಿ ವಿರುದ್ಧ ಖಾಸಗಿ ಮಾನಹಾನಿ ದೂರು ಸಲ್ಲಿಸಿದ್ದರು. ಬೆಂಗಳೂರಿನ 42ನೇ ಹೆಚ್ಚುವರಿ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಪ್ರಕರಣ ವಿಚಾರಣೆಗೆ ಬಾಕಿಯಿದೆ. ಈ ಪ್ರಕರಣದ ವಿಚಾರಣಾ ಪ್ರಕ್ರಿಯೆ ಹಾಗೂ ಸಮನ್ಸ್ ಆದೇಶವನ್ನು ರದ್ದುಪಡಿಸುವಂತೆ ಕೋರಿ ಮನೇಕಾ ಗಾಂಧಿ ಹೈಕೋರ್ಟ್ ಮೊರೆ ಹೋಗಿದ್ದರು. ಇದೀಗ ಹೈಕೋರ್ಟ್ ಪ್ರಕರಣವನ್ನು ರದ್ದುಪಡಿಸಲು ನಿರಾಕರಿಸಿದ್ದು, ಸತ್ರ ನ್ಯಾಯಾಲಯದಲ್ಲಿ ಕಾನೂನು ಪರಿಹಾರ ಪಡೆಯಲು ಮೇನಕಾ ಗಾಂಧಿಗೆ ಅವಕಾಶ ನೀಡಿದೆ.

VEERASAIVA VIDYAVARDHAKA SANGHA'S
ರಾವ್ ಬಹದ್ದೂರ್ ವೈ. ಮಹಾಬಲೇಶ್ವರಪ್ಪ
ಇಂಜಿನಿಯರಿಂಗ್ ಕಾಲೇಜ್
RAO BAHADUR Y.MAHABALESWARAPPA
ENGINEERING COLLEGE



08392-244809 | 9448043949 | 9345753487 | 8861125550, TELE FAX: 08392-242148
Principalrymec@gmail.com CONTONMENT, BALLARI - 583 104. (KARNATAKA).



ಸಮಸ್ತ ನಾಡಿನ ಜನತೆಗೆ
ದೀಪಾವಳಿ ಹಬ್ಬದ
ಶುಭಾಶಯಗಳು




ADMISSIONS IN PROGRESS 2026-27



Dr. Kanekal Mahantesh
President
V.V. Sangha Ballari




Sri JanaKunte Basavaraj
Vice president
V.V.Sangha Ballari



Dr. Arvind Patel
Secretary
V.V.Sangha Ballari



Sri. Meti Pompan Gowda
Joint secretary
V.V.Sangha Ballari



Dr. H. Maha baleshwara
Principal
V.V.Sangha Ballari



Sri Byluvaddigeri yerriswamy
Treasurer
V.V.Sangha Ballari



Sri. Prabhu Swamy S M
GB Members
V.V.Sangha Ballari



Sri Badada Prakash
GB Members
V.V.Sangha Ballari

ವೀರಶೈವ ವಿದ್ಯಾವರ್ಧಕ ಸಂಘ - ಬಳ್ಳಾರಿ



ಬಿಜೆಪಿ ಹಾಗೂ ಕರ್ನಾಟಕ ರಾಜ್ಯೋತ್ಸವದ
ಹಾರ್ದಿಕ ಶುಭಾಶಯಗಳು

ನಾಡಿನ ಸರ್ವರಿಗೂ ಹಿತೈಷಿಗಳಿಗೂ ಗಣ್ಯರಿಗೂ
ಸ್ನೇಹಿತರಿಗೂ ಹಾಗೂ ಸಮಸ್ತ ನಾಗರೀಕರಿಗೆ
ಬೆಳ್ಳನೆ ಬೆಳಕಿನ ದೀಪಾವಳಿಯ
ಹಾರ್ದಿಕ ಶುಭಾಶಯಗಳು.
ದೀಪಾವಳಿಯ ದೀಪಗಳ ಪ್ರಜ್ವಲತೆ
ಅಭಿವೃದ್ಧಿಯ ಜ್ಯೋತಿಯಾಗಿ
ಸದೃಢ ನಾಡು ನಿರ್ಮಾಣವಾಗಲಿ
ನಾಡು ಮತ್ತಷ್ಟು ಸಮೃದ್ಧವಾಗಿ ಬೆಳೆಯಲಿ

Diwali

ಜಿ.ಸೋಮಶೇಖರರೆಡ್ಡಿ
ಮಾಜಿ ನಗರ ಶಾಸಕರು, ಬಳ್ಳಾರಿ



ಶ್ರೀ ಡಿ. ಕೆ. ಶಿವಕುಮಾರ್
ಸನ್ಮಾನ್ಯ ಮುಖ್ಯಮಂತ್ರಿಗಳು

ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ
ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

ಡಾ ಜಿ. ಪರಮೇಶ್ವರ್
ಮಾನ್ಯ ಉಪ ಮುಖ್ಯಮಂತ್ರಿಗಳು



ದೀಪ ಬೆಳಗುವ ಮೂಲಕ ಸುರಕ್ಷಿತ ಹಾಗೂ ಪರಿಸರ ಸ್ನೇಹಿ ಹಬ್ಬ ಆಚರಿಸೋಣ



ನಾಡಿನ ಸಮಸ್ತ ಜನತೆಗೆ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು



ಶ್ರೀ ರಾಮಲಿಂಗಾರೆಡ್ಡಿ
ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು
ಇಲಾಖೆಯ ಪರಿವೀಕ್ಷಣೆಯಲ್ಲಿ ಭಾಗಿಯಾದ ಸಂದರ್ಭ

ಈ ದೀಪಾವಳಿಯಂದು ಹಣತೆಯನ್ನು ಬೆಳಗುವ ಮೂಲಕ ಸುರಕ್ಷಿತ ಹಾಗೂ ಪರಿಸರ ಸ್ನೇಹಿ ಹಬ್ಬವನ್ನು ಆಚರಿಸೋಣ. ದೀಪಾವಳಿಯು ಬೆಳಕಿನ ಹಬ್ಬ , ವಾಯು ಮತ್ತು ಶಬ್ದ ಮಾಲಿನ್ಯವನ್ನು ತಡೆಗಟ್ಟೋಣ.

ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನಗಳು

ದೀಪಾವಳಿಯ ಹಬ್ಬದ ದಿನಗಳಂದು ರಾತ್ರಿ 8 ರಿಂದ 10 ಗಂಟೆಯೊಳಗೆ ಮಾತ್ರ ಪಟಾಕಿ ಹಚ್ಚಲು ಅವಕಾಶ.

125 ಡೆಸಿಬಲ್‌ಗಿಂತ ಹೆಚ್ಚು ಶಬ್ದ ಹೊರಸೂಸುವ ಪಟಾಕಿ ಹಚ್ಚುವುದು ನಿಷಿದ್ಧ.

ಕಡಿಮೆ ಮಾಲಿನ್ಯ ಉಂಟುಮಾಡುವ ಹಸಿರು ಪಟಾಕಿಗಳನ್ನು ಮಾತ್ರ ಬಳಸಲು ಅವಕಾಶ.

ಪರಿಸರಕ್ಕೆ ಹಾನಿ ಉಂಟುಮಾಡುವ ಹಾಗೂ ನಿಷೇಧಿತ ಪಟಾಕಿಗಳನ್ನು ಬಳಸದೆ, ಹಸಿರು ಪಟಾಕಿಗಳನ್ನು ಮಾತ್ರ ಬಳಸೋಣ.

ಪಟಾಕಿಗಳ ಸದ್ದು ಮತ್ತು ಹೊಗೆಯಿಂದ ಮಕ್ಕಳು, ವಯೋವೃದ್ಧರು, ಅನಾರೋಗ್ಯ ಪೀಡಿತರು ಹಾಗೂ ಪ್ರಾಣಿ-ಪಕ್ಷಿಗಳಿಗೆ ತೊಂದರೆಯಾಗದಂತೆ ಎಚ್ಚರ ವಹಿಸೋಣ.

ದೇಶದ ಕಾಡು, ವನ್ಯಜೀವಿ, ನದಿಗಳು ಸೇರಿ ಪರಿಸರ ಸಂರಕ್ಷಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ , ಮೂಲಭೂತ ಕರ್ತವ್ಯ

ಸಾರ್ವಜನಿಕ ಹಿತಾಸಕ್ತಿಯಿಂದ ಪ್ರಕಟಿಸಿದವರು: ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
"ಪರಿಸರ ಭವನ", ನಂ.49, ಚರ್ಚ್ ಸ್ಟ್ರೀಟ್ ಬೆಂಗಳೂರು - 560 001
ದೂರವಾಣಿ: 080-25581383, 9113, 9114 ಇ-ಮೇಲ್: contact@kspcb.gov.in ವೈಬ್‌ಸೈಟ್: www.kspcb.karnataka.gov.in


ಶ್ರೀ ಬಿ. ಶಿವಣ್ಣ
ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ಶಾಸಕರು, ಆನೇಕಲ್ ವಿಧಾನ ಸಭಾ ಕ್ಷೇತ್ರ

ಸ್ವಯಂಸೇವಕರೇ ಆರ್‌ಎಸ್‌ಎಸ್‌ನ ಗುರುತು: ಭಾಗವತ್

ನಾಗಪುರ,ನ. 9: ಸ್ವಯಂಸೇವಕರೇ ರಾಷ್ಟ್ರೀಯ ಸ್ವಯಂಸೇವಕ ಸಂಘದ ಗುರುತಾಗಿದ್ದಾರೆ, ಸಂಘ ಸ್ಥಾಪನೆಯಾಗಿ 100 ವರ್ಷಗಳು ಕಳೆದರೂ ಸ್ವಯಂಸೇವಕರೇ ಸಂಘದ ಗುರುತಾಗಿ ಉಳಿದಿದ್ದಾರೆ ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದ್ದಾರೆ.

ಮಹಾರಾಷ್ಟ್ರದ ನಾಗಪುರದಲ್ಲಿ ನಾಗಪುರ ನಾಗರಿಕ ಸಹಕಾರಿ ಬ್ಯಾಂಕ್‌ನ ನವೀಕೃತ ಮುಖ್ಯ ಕಚೇರಿಯಲ್ಲಿ ನೂತನವಾಗಿ ನಿರ್ಮಿಸಲಾದ ಸಭಾಂಗಣವನ್ನು ಉದ್ಘಾಟಿಸಿದ ಬಳಿಕ ಮಾತನಾಡಿದ ಅವರು, ಸಂಘದ ಆರಂಭಿಕ ದಿನಗಳ ಘಟನೆಯೊಂದನ್ನು ಸ್ಮರಿಸಿದರು.

1930ರ ದಶಕದಲ್ಲಿ ಸೆಂಟ್ರಲ್ ಪ್ರಾವಿನ್ಸ್ ವಿಧಾನಸಭೆಯಲ್ಲಿ ಆರ್‌ಎಸ್‌ಎಸ್ ಮೇಲೆ ಮೊದಲ ಬಾರಿಗೆ ನಿಷೇಧ ಹೇರಲು ಪ್ರಯತ್ನ ನಡೆದಿತ್ತು. ಆಗ ಸಂಘದ ಪರವಾಗಿ ಮಾತನಾಡಲು ಯಾವುದೇ ಸ್ವಯಂಸೇವಕರು ಅಥವಾ ಸಂಘದ ವಿಚಾರಧಾರೆಯನ್ನು ಬೆಂಬಲಿಸುವವರು ಮುಂದೆ ಬಂದಿರಲಿಲ್ಲ. ಆದರೆ, ಇಬ್ರಾಹಿಂ ಎಂಬ ಮುಸ್ಲಿಂ ವ್ಯಕ್ತಿಯೊಬ್ಬರು ಸಂಘದ ಪರವಾಗಿ ಧ್ವನಿ ಎತ್ತಿದ್ದರು ಎಂದು ಭಾಗವತ್ ತಿಳಿಸಿದರು. ಸಂಘವನ್ನು ನಿಷೇಧಿಸಬಾರದು, ಅದು ಕೋಮುವಾದಿ ಸಂಘಟನೆಯಲ್ಲ ಎಂದು ಇಬ್ರಾಹಿಂ ವಾದಿಸಿದ್ದರು. ಹಿಂದೂರಾಷ್ಟ್ರ ಎಂದು ಹೇಳುವವರನ್ನು ಮಾನಸಿಕ ಆಸ್ಪತ್ರೆಗೆ ಕಳುಹಿಸಬೇಕು ಎಂದು ನಾನು ಭಾವಿಸುತ್ತೇನೆ. ಆದರೆ, ಡಾ. ಕೇಶವ ಬಲಿರಾಮ್ ಹೆಡಗೇವಾರ್ ಅವರನ್ನು ನಾನು



ಬಲ್ಲೆ. ಅವರು ಮಾನಸಿಕ ಅಸ್ವಸ್ಥರಲ್ಲ, ಒಳ್ಳೆಯ ವ್ಯಕ್ತಿ. ಹೀಗಾಗಿ ಸಂಘವನ್ನು ಕೋಮುವಾದಿ ಎಂದು ಕರೆಯಲು ಸಾಧ್ಯವಿಲ್ಲ ಎಂದು ಇಬ್ರಾಹಿಂ ಹೇಳಿದ್ದಾಗಿ ಭಾಗವತ್ ಸ್ಮರಿಸಿದರು.

ಆ ಸಮಯದಲ್ಲಿ ಸಂಘ ಸ್ಥಾಪನೆಯಾಗಿ ಕೆಲವೇ ವರ್ಷಗಳು ಕಳೆದಿದ್ದವು. ಸಂಘದ ಬಗ್ಗೆ ಹೆಚ್ಚಿನ ಜನರಿಗೆ ಪರಿಚಯವಿರಲಿಲ್ಲ. ಆದರೆ, ಡಾ. ಹೆಡಗೇವಾರ್ ಅವರನ್ನು ಎಲ್ಲರೂ ತಿಳಿದಿದ್ದರು. ಸಂಘದ ಆರಂಭದಿಂದಲೇ ಸ್ವಯಂಸೇವಕರು ಅದರ ಗುರುತಾಗಿದ್ದಾರೆ. ಇಂದಿಗೂ 100 ವರ್ಷಗಳ ಬಳಿಕ ಅದೇ ಗುರುತು ಮುಂದುವರಿದಿದೆ ಎಂದು ಅವರು ಹೇಳಿದರು.

ಪ್ರಚಾರಕರ ನಿಸ್ವಾರ್ಥ ಸೇವೆಯ ಉಲ್ಲೇಖ

ಇದೇ ವೇಳೆ ಆರ್‌ಎಸ್‌ಎಸ್ ಪ್ರಚಾರಕರ ಜೀವನದ ಕುರಿತು ಬರೆಯಲಾಗುತ್ತಿರುವ ಪುಸ್ತಕದ ಬಗ್ಗೆಯೂ ಭಾಗವತ್ ಪ್ರಸ್ತಾಪಿಸಿದರು. ಪ್ರಚಾರಕರ ಜೀವನದ ಬಗ್ಗೆ ಬರೆಯುತ್ತಿರುವುದು ಕೃತಜ್ಞತೆ ಮತ್ತು ಪ್ರೀತಿಯ ಕಾರಣಕ್ಕಾಗಿಯೇ

■ 1930ರ ದಶಕದಲ್ಲಿ ಸಂಘದ ಮೇಲಿನ ನಿಷೇಧದ ಪ್ರಯತ್ನಕ್ಕೆ ಮುಸ್ಲಿಂ ವ್ಯಕ್ತಿ ಇಬ್ರಾಹಿಂ ವಿರೋಧ ವ್ಯಕ್ತಪಡಿಸಿದ್ದರು

ಹೊರತು ಯಾವುದೇ ವೈಯಕ್ತಿಕ ಅಥವಾ ಭೌತಿಕ ಲಾಭಕ್ಕಾಗಿ ಅಲ್ಲ ಎಂದು ಹೇಳಿದರು.

ಪ್ರಚಾರಕರಿಗೆ ಸಂಘವೇ ಎಲ್ಲವೂ. ಅವರು ಯಾವುದೇ ವೈಯಕ್ತಿಕ ಲಾಭ ಅಥವಾ ಪ್ರತಿಫಲವನ್ನು ನಿರೀಕ್ಷಿಸುವುದಿಲ್ಲ. ಅವರ ಸಮರ್ಪಣೆ ಮತ್ತು ನಿಷ್ಠೆಯನ್ನು ಕೇವಲ ಪದಗಳಲ್ಲಿ ಸಂಪೂರ್ಣವಾಗಿ ವಿವರಿಸಲು ಸಾಧ್ಯವಿಲ್ಲ. ಅವರೊಂದಿಗೆ ನೇರ ಸಂಪರ್ಕ ಹೊಂದಿದವರು ಮಾತ್ರ ಅವರ ಜೀವನದ ಬದ್ಧತೆಯನ್ನು ನಿಜವಾಗಿ ಅರ್ಥಮಾಡಿಕೊಳ್ಳಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಸ್ವಯಂಸೇವಕರ ಜೀವನವು ಪ್ರವಾಹದ ವಿರುದ್ಧ ಈಜಿದಂತೆ ಎಂದು ಬಣ್ಣಿಸಿದ ಭಾಗವತ್, ಸ್ವಾರ್ಥ, ಅಹಂಕಾರ ಮತ್ತು ವೈಯಕ್ತಿಕ ನಿರೀಕ್ಷೆಗಳಿಗೆ ಅಲ್ಲಿ ಅವಕಾಶವಿಲ್ಲ ಎಂದರು. ಸಮಾಜಕ್ಕೆ ತಾನು ಎಷ್ಟು ಒಳ್ಳೆಯದನ್ನು ಮಾಡಬಹುದು ಎಂಬುದೇ ಸ್ವಯಂಸೇವಕನ ಮುಖ್ಯ ಚಿಂತನೆಯಾಗಿರಬೇಕು. ಎಲ್ಲ ಸ್ವಯಂಸೇವಕರು ಈ ಆದರ್ಶವನ್ನು ಒಂದೇ ಮಟ್ಟದಲ್ಲಿ ಪಾಲಿಸದಿದ್ದರೂ, ಅವರ ಗುರಿ ಮತ್ತು ದಿಕ್ಕು ಒಂದೇ ಆಗಿರುತ್ತದೆ ಎಂದು ಹೇಳಿದರು.

ಕೇರಳದಲ್ಲೂ ಪೆಟ್ರೋಲ್‌ನಲ್ಲಿನ ಎಥೆನಾಲ್ ಪ್ರಮಾಣ ಪರೀಕ್ಷೆ

ತಿರುವನಂತಪುರ, ನ. 9: ಕರ್ನಾಟಕದಲ್ಲಿ ಪೆಟ್ರೋಲ್‌ನಲ್ಲಿ ನಿಗದಿತ ಪ್ರಮಾಣಕ್ಕಿಂತ ಅಧಿಕ ಎಥೆನಾಲ್ ಮಿಶ್ರಣ ಮಾಡಲಾಗುತ್ತಿದೆ ಎಂಬ ಬಹುದೊಡ್ಡ ವಿವಾದ ಭುಗಿಲೆದ್ದಿರುವ ಬೆನ್ನಲ್ಲೇ, ಇದೀಗ ನೆರೆರಾಜ್ಯ ಕೇರಳ ಕೂಡ ಎಚ್ಚೆತ್ತುಕೊಂಡಿದೆ. ತನ್ನ ರಾಜ್ಯದಲ್ಲಿ ಮಾರಾಟವಾಗುತ್ತಿರುವ ಪೆಟ್ರೋಲ್‌ನಲ್ಲಿರುವ ಎಥೆನಾಲ್ ಪ್ರಮಾಣವನ್ನು ಪರೀಕ್ಷಿಸಲು ಕೇರಳ ಸರ್ಕಾರ ಮುಂದಾಗಿದೆ. ವಾಹನ ಸವಾರರ ಹಿತದೃಷ್ಟಿಯಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ.

ಇತ್ತೀಚೆಗೆ ಕರ್ನಾಟಕ ಸರ್ಕಾರವು ನಡೆಸಿದ ಪರೀಕ್ಷೆಯಲ್ಲಿ ಕೆಲವು ಪೆಟ್ರೋಲ್ ಮಾದರಿಗಳಲ್ಲಿ ಶೇಕಡಾ 31.2 ರಷ್ಟು ಎಥೆನಾಲ್ ಇರುವುದು ಪತ್ತೆಯಾಗಿತ್ತು. ವಾಹನಗಳ ಎಂಜಿನ್ ಸ್ಥಗಿತಗೊಳ್ಳುತ್ತಿರುವ ಬಗ್ಗೆ ವಾಹನ ಸವಾರರು ಹಾಗೂ ಕರ್ನಾಟಕದ ಮುಖ್ಯಮಂತ್ರಿಗಳು ತೀವ್ರ ಕಳವಳ ವ್ಯಕ್ತಪಡಿಸಿದ್ದರು. ಈ ವಿದ್ಯಮಾನವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿರುವ ಕೇರಳದ ಆಹಾರ ಮತ್ತು ನಾಗರಿಕ ಸರಬರಾಜು ಖಾತೆ ಸಚಿವ ಅನೂಪ್ ಜೇಕಬ್ ಅವರು, ತಮ್ಮ ರಾಜ್ಯದಲ್ಲೂ ತಕ್ಷಣವೇ ಪರೀಕ್ಷೆ ನಡೆಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಈ ವಿಚಾರವಾಗಿ ಕೇರಳದ ಮುಖ್ಯಮಂತ್ರಿ ವಿ.ಡಿ. ಸತೀಶನ್ ಅವರೊಂದಿಗೆ ಸವಿವರವಾದ ಚರ್ಚೆ ನಡೆಸಿದ ಸಚಿವ ಅನೂಪ್ ಜೇಕಬ್ ಅವರು ಕಠಿಣ ಕ್ರಮದ ಎಚ್ಚರಿಕೆ ನೀಡಿದ್ದಾರೆ. ಮುಂಜಾಗ್ರತಾ ಕ್ರಮವಾಗಿ ಸೋಮವಾರದಿಂದಲೇ



ಕೇರಳದ ವಿವಿಧ ಜಿಲ್ಲೆಗಳ ಕನಿಷ್ಠ ಇಪ್ಪತ್ತು ಆಯ್ದ ಕೇಂದ್ರಗಳಿಂದ ಪೆಟ್ರೋಲ್ ಮಾದರಿಗಳನ್ನು ಸಂಗ್ರಹಿಸಿ ಲ್ಯಾಬ್ ಪರೀಕ್ಷೆಗೆ ಒಳಪಡಿಸಲು ಸರ್ಕಾರಿ ಮೂಲಗಳು ತಿಳಿಸಿವೆ. ಶೇಕಡಾ 20 ಕ್ಕಿಂತ ಅಧಿಕ ಎಥೆನಾಲ್ ಇರುವ ಇಂಧನವನ್ನು ಮಾರಾಟ ಮಾಡುವ ಪೆಟ್ರೋಲ್ ಬಂಕ್‌ಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುವಂತೆ ಕಟ್ಟುನಿಟ್ಟಿನ ನಿರ್ದೇಶನ ನೀಡಲಾಗಿದೆ.

ಇ20 (ಶೇ.20ರಷ್ಟು ಎಥೆನಾಲ್ ಮಿಶ್ರಿತ) ಪೆಟ್ರೋಲ್ ಮಾರುಕಟ್ಟೆಗೆ ಪರಿಚಯಿಸಿದಾಗಿನಿಂದ, ಹಳೆಯ ಕಾರ್ಬ್ಯುರೇಟರ್ ವ್ಯವಸ್ಥೆ ಹೊಂದಿರುವ ದ್ವಿಚಕ್ರ ಹಾಗೂ ಇತರೆ ವಾಹನಗಳಲ್ಲಿ ಎಂಜಿನ್ ಮಿಸ್ಸಿಂಗ್ ಮತ್ತು ಸ್ಟಾರ್ಟಿಂಗ್ ಸಮಸ್ಯೆಗಳು ವ್ಯಾಪಕವಾಗಿ ಕಂಡುಬರುತ್ತಿವೆ. ಗ್ರಾಹಕರು ಈ ಬಗ್ಗೆ ಪದೇ ಪದೇ ದೂರು ನೀಡುತ್ತಿದ್ದು, ಕಾರ್ಬ್ಯುರೇಟರ್ ಅನ್ನು ಆಗಾಗ್ಗೆ ಸ್ವಚ್ಛಗೊಳಿಸಬೇಕಾದ ಅನಿವಾರ್ಯತೆ ಎದುರಾಗಿದೆ. ಇದರಿಂದಾಗಿ ವಾಹನ ರಿಪೇರಿ ಮಾಡುವಾಗ ತಾವು ಗ್ರಾಹಕರ ತೀವ್ರ ಆಕ್ರೋಶಕ್ಕೆ ಗುರಿಯಾಗುತ್ತಿದ್ದೇವೆ ಎಂದು ಸ್ಥಳೀಯ ಮೆಕ್ಯಾನಿಕ್‌ಗಳು ಮಾಧ್ಯಮಗಳ ಮುಂದೆ ತಮ್ಮ ಅಳಲು ತೋಡಿಕೊಂಡಿದ್ದಾರೆ.

ಈ ಎಲ್ಲಾ ಬೆಳವಣಿಗೆಗಳ ಕುರಿತು ಪ್ರತಿಕ್ರಿಯಿಸಿರುವ ಕೇಂದ್ರ ಪೆಟ್ರೋಲಿಯಂ ಖಾತೆ ರಾಜ್ಯ ಸಚಿವ ಸುರೇಶ್ ಗೋಪಿ, ರಾಜ್ಯ ಸರ್ಕಾರಗಳು ಪೆಟ್ರೋಲ್ ಗುಣಮಟ್ಟವನ್ನು ಪರೀಕ್ಷಿಸಲು ಸಂಪೂರ್ಣ ಸ್ವತಂತ್ರವಾಗಿವೆ ಎಂದು ಹೇಳಿದ್ದಾರೆ. ಆದರೆ ಈ ಸೂಕ್ಷ್ಮ ವಿಷಯವನ್ನು ವಿನಾಕಾರಣ ರಾಜಕೀಯಗೊಳಿಸಬಾರದು ಎಂದು ಅವರು ಮನವಿ ಮಾಡಿದ್ದಾರೆ. ಸುದೀರ್ಘ ವೈಜ್ಞಾನಿಕ ಅಧ್ಯಯನಗಳ ನಂತರವೇ ದೇಶಾದ್ಯಂತ ಪೆಟ್ರೋಲ್‌ಲ್ಲಿ ಶೇ.20ರಷ್ಟು ಎಥೆನಾಲ್ ಮಿಶ್ರಣಕ್ಕೆ ಕೇಂದ್ರ ಸರ್ಕಾರ ಅಧಿಕೃತವಾಗಿ ಅನುಮತಿ ನೀಡಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಒಂದೆಡೆ ರಾಜ್ಯ ಸರ್ಕಾರಗಳು ವಾಹನ ಸವಾರರ ದೂರುಗಳ ಆಧಾರದ ಮೇಲೆ ತಪಾಸಣೆಗೆ ಮುಂದಾಗಿದ್ದರೆ, ಮತ್ತೊಂದೆಡೆ ತೈಲ ಕಂಪನಿಗಳು ಈ ಎಲ್ಲಾ ಆರೋಪಗಳನ್ನು ಸಾರಾಸಗಟಾಗಿ ತಳ್ಳಿಹಾಕಿವೆ. ಪೆಟ್ರೋಲ್‌ನಲ್ಲಿ ಕೇಂದ್ರ ಸರ್ಕಾರ ನಿಗದಿಪಡಿಸಿರುವ ಗರಿಷ್ಠ ಮಿತಿಯಾದ ಶೇಕಡಾ 20 ಕ್ಕಿಂತ ಹೆಚ್ಚು ಎಥೆನಾಲ್ ಮಿಶ್ರಣ ಮಾಡಲಾಗುತ್ತಿದೆ ಎಂಬ ಆರೋಪದಲ್ಲಿ ಯಾವುದೇ ಹುರುಳಿಲ್ಲ ಎಂದು ತೈಲ ಕಂಪನಿಗಳು ಈಗಾಗಲೇ ಸ್ಪಷ್ಟನೆ ನೀಡಿವೆ. ಕೇರಳ ಸರ್ಕಾರದ ಈ ತಪಾಸಣೆಯ ವರದಿ ಬಂದ ನಂತರವೇ ವಾಸ್ತವಾಂಶ ಹೊರಬೀಳಬೇಕಿದೆ.

ಚೀನಾದ ಬೇಹುಗಾರ್ತಿ ಜತೆ ಎನ್ವಿಡಿಯಾ ಸಿಇಒಗೆ ಅಕ್ರಮ ಸಂಬಂಧ?

40 ಸಾವಿರ ಕೋಟಿ ರೂ. ಮೌಲ್ಯದ ಚಿಪ್‌ಗಳ ರವಾನೆ ಬಗ್ಗೆ ತನಿಖೆ

ನವದೆಹಲಿ,ನ.9: ಜಾಗತಿಕ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಕ್ಷೇತ್ರದ ಪ್ರಮುಖ ಕಂಪನಿ ಎನ್ವಿಡಿಯಾ ಸಿಇಒ ಜೆನ್ಸನ್ ಹುವಾಂಗ್ ವಿವಾಹೇತರ ಸಂಬಂಧ ಹಾಗೂ ಚೀನಾದ ಬೇಹುಗಾರಿಕೆ ಜಾಲದ ಆರೋಪಗಳಿಂದ ವಿವಾದಕ್ಕೆ ಸಿಲುಕಿದ್ದಾರೆ. ಚೀನಾದ ಗುಪ್ತಚರ ಸಂಸ್ಥೆಯೊಂದಿಗೆ ಸಂಪರ್ಕ ಹೊಂದಿರುವ ಶಂಕೆಯಿರುವ ಉದ್ಯಮಿ ಆಲಿಸ್ ಹುವಾಂಗ್ ಜತೆಗಿನ ನಿಕಟ ಸಂಬಂಧವನ್ನು ಜೆನ್ಸನ್ ಹುವಾಂಗ್ ಒಪ್ಪಿಕೊಂಡಿದ್ದು, ಪ್ರಕರಣದ ಕುರಿತು ಕಂಪನಿಯ ಆಡಳಿತ ಮಂಡಳಿ ಸ್ವತಂತ್ರ ತನಿಖೆಗೆ ಆದೇಶಿಸಿದೆ.

63 ವರ್ಷದ ಜೆನ್ಸನ್ ಹುವಾಂಗ್ ಕಂಪನಿಯ ಉದ್ಯೋಗಿಗಳಿಗೆ ಕಳುಹಿಸಿರುವ ಆಂತರಿಕ ಇಮೇಲ್‌ನಲ್ಲಿ ತಮ್ಮ ಪತ್ನಿಗೆ ದ್ರೋಹ ಬಗೆದಿರುವುದಾಗಿ ಒಪ್ಪಿಕೊಂಡಿದ್ದಾರೆ. ತಮ್ಮ ನಡೆ ಪತ್ನಿ ಹಾಗೂ ಮಕ್ಕಳಿಗೆ ನೋವುಂಟುಮಾಡಿದೆ. ಇದಕ್ಕೆ ಯಾವುದೇ ಸಮರ್ಥನೆ ಇಲ್ಲ. ತಮ್ಮ ತಪ್ಪಿಗೆ ಕ್ಷಮೆಯಾಚಿಸುವುದಾಗಿ ತಿಳಿಸಿದ್ದಾರೆ. ಕುಟುಂಬದ ಜತೆಗೆ ಕಂಪನಿಯ ಆಡಳಿತ ಮಂಡಳಿ, ಉದ್ಯೋಗಿಗಳು ಹಾಗೂ ಷೇರುದಾರರ ವಿಶ್ವಾಸವನ್ನು ಮರಳಿ ಗಳಿಸುವುದಾಗಿ ಹೇಳಿದ್ದಾರೆ.

ಆಲಿಸ್ ಹುವಾಂಗ್ ಚೀನೀ ಮೂಲದ ಉದ್ಯಮಿಯಾಗಿದ್ದು, ಸಿಂಗಾಪುರದ ಮೆಗಾಸ್ಪೀಡ್ ಇಂಟರ್‌ನ್ಯಾಷನಲ್ ಎಂಬ ಡೇಟಾ ಸೆಂಟರ್ ಕಂಪನಿಯ ಉನ್ನತ ಅಧಿಕಾರಿಯಾಗಿದ್ದರು. ಈ ಹಿಂದೆ ಪತ್ರಕರ್ತೆಯಾಗಿಯೂ ಕೆಲಸ ಮಾಡಿದ್ದರು ಎನ್ನಲಾಗಿದೆ.

2024ರ ಜೂನ್‌ನಲ್ಲಿ ತೈಪೆಯಲ್ಲಿ ನಡೆದ ತಂತ್ರಜ್ಞಾನ ಕ್ಷೇತ್ರದ ಕಾರ್ಯಕ್ರಮವೊಂದರಲ್ಲಿ ಇಬ್ಬರೂ ಒಟ್ಟಿಗೆ ಕಾಣಿಸಿಕೊಂಡಿದ್ದರು. 2025ರ ಮೇ ತಿಂಗಳಲ್ಲಿ ಕಂಪ್ಯೂಟೆಕ್ಸ್ ಪ್ರದರ್ಶನದ ಸಂದರ್ಭದಲ್ಲಿ ಜೆನ್ಸನ್ ಹುವಾಂಗ್ ಆಯೋಜಿಸಿದ್ದ ಔತಣಕೂಟದಲ್ಲಿಯೂ ಆಲಿಸ್ ಭಾಗವಹಿಸಿದ್ದರು. ಈ ವೇಳೆ ಜೆನ್ಸನ್ ಕೆನ್ನೆಗೆ ಮುತ್ತಿಟ್ಟು, ಬೆನ್ನಿನ ಮೇಲೆ ಕೈಯಿಟ್ಟ ದೃಶ್ಯ ಹಾಗೂ ಛಾಯಾಚಿತ್ರಗಳು ಬಹಿರಂಗವಾಗಿದ್ದವು. ನಂತರ ಇಬ್ಬರೂ ಒಂದೇ ಕಾರಿನಲ್ಲಿ ತೆರಳಿರುವುದು ಕೂಡ ವರದಿಯಾಗಿದೆ.

ಅಮೆರಿಕದ ಗುಪ್ತಚರ ಸಂಸ್ಥೆಗಳು ಆಲಿಸ್ ಹುವಾಂಗ್ ಚೀನಾದ ರಾಜ್ಯ ಭದ್ರತಾ ಸಚಿವಾಲಯದ ಪರವಾಗಿ ಮಾಹಿತಿ ಸಂಗ್ರಹಿಸುತ್ತಿದ್ದಿರಬಹುದು ಎಂದು ಶಂಕಿಸಿವೆ. ಎನ್ವಿಡಿಯಾ ಮುಖ್ಯಸ್ಥರೊಂದಿಗಿನ ನಿಕಟ ಸಂಬಂಧ ಬಳಸಿಕೊಂಡು ಕಂಪನಿಯ ಕಾರ್ಯತಂತ್ರ, ಅಮೆರಿಕದ ಎಐ ನೀತಿ ಹಾಗೂ ಗೌಪ್ಯ ಮಾಹಿತಿಗಳನ್ನು ಪಡೆಯಲು ಪ್ರಯತ್ನಿಸಿರುವ ಸಾಧ್ಯತೆಯ ಬಗ್ಗೆ ತನಿಖೆ ನಡೆಯುತ್ತಿದೆ.

ಟ್ರಂಪ್ ಆಡಳಿತಕ್ಕೂ ಮಾಹಿತಿ

ಆಲಿಸ್ ಹುವಾಂಗ್ ಅವರ ಚಟುವಟಿಕೆಗಳ ಕುರಿತು ಅಮೆರಿಕದ ಗುಪ್ತಚರ ಸಂಸ್ಥೆಗಳು ಸಿದ್ಧಪಡಿಸಿದ್ದ ರಹಸ್ಯ ವರದಿಯನ್ನು ಟ್ರಂಪ್ ಆಡಳಿತದ ಹಿರಿಯ ಅಧಿಕಾರಿಗಳಿಗೆ ತಲುಪಿಸಲಾಗಿತ್ತು ಎಂದು ವರದಿಯಾಗಿದೆ. ಸುಮಾರು ಒಂದು ವರ್ಷದ ಹಿಂದೆಯೇ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೂ ಈ ಮಾಹಿತಿ ನೀಡಲಾಗಿತ್ತು. ಆರಂಭದಲ್ಲಿ ವಾಣಿಜ್ಯ ಇಲಾಖೆಯ ವ್ಯಾಪ್ತಿಯಲ್ಲಿದ್ದ ತನಿಖೆಯನ್ನು ಬಳಿಕ ನ್ಯಾಯಾಂಗ ಇಲಾಖೆಗೆ ವರ್ಗಾಯಿಸಲಾಗಿದೆ ಎನ್ನಲಾಗಿದೆ. ಎನ್ವಿಡಿಯಾ ಆಡಳಿತ ಮಂಡಳಿ

40 ಸಾವಿರ ಕೋಟಿ ಮೌಲ್ಯದ ಚಿಪ್‌ಗಳ ರಹಸ್ಯ

ಈ ಪ್ರಕರಣದಲ್ಲಿ ಸುಮಾರು 4.8 ಶತಕೋಟಿ ಅಮೆರಿಕನ್ ಡಾಲರ್ ಅಂದರೆ 40 ಸಾವಿರ ಕೋಟಿ ರೂ.ಗೂ ಅಧಿಕ ಮೌಲ್ಯದ ಎಐ ಚಿಪ್‌ಗಳ ವ್ಯವಹಾರ ಪ್ರಮುಖ ಅಂಶವಾಗಿದೆ.

ಸಿಂಗಾಪುರ ಮೂಲದ ಮೆಗಾಸ್ಪೀಡ್ ಕಂಪನಿ ಎರಡು ವರ್ಷಗಳ ಅವಧಿಯಲ್ಲಿ ಎನ್ವಿಡಿಯಾದಿಂದ ಬೃಹತ್ ಪ್ರಮಾಣದ ಅತ್ಯಾಧುನಿಕ ಎಐ ಚಿಪ್‌ಗಳನ್ನು ಖರೀದಿಸಿತ್ತು. 2024ರ ಜೂನ್ನಿಂದ 2026ರ ಫೆಬ್ರವರಿವರೆಗೆ ಕಂಪನಿಯ ಮಲೇಷ್ಯಾ ಘಟಕ ಸುಮಾರು 4.8 ಬಿಲಿಯನ್ ಡಾಲರ್ ಮೌಲ್ಯದ ಎಐ ಉಪಕರಣಗಳನ್ನು ಖರೀದಿಸಿರುವುದು ಅಮೆರಿಕದ ಅಧಿಕಾರಿಗಳ ಗಮನ ಸೆಳೆದಿದೆ.

ಚೀನಾಕ್ಕೆ ಅತ್ಯಾಧುನಿಕ ಎಐ ಚಿಪ್‌ಗಳನ್ನು ರಫ್ತು ಮಾಡುವುದರ ಮೇಲೆ ಅಮೆರಿಕ ನಿರ್ಬಂಧ ವಿಧಿಸಿದೆ. ಆದರೆ, ಆಗ್ನೇಯ ಏಷ್ಯಾದಲ್ಲಿ ಖರೀದಿಸಲಾದ ಚಿಪ್ಸ್‌ಗಳನ್ನು ಮಲೇಷ್ಯಾ ಮೂಲಕ ಚೀನಾಕ್ಕೆ ಅಕ್ರಮವಾಗಿ ಸಾಗಿಸಲಾಗುತ್ತಿದೆಯೇ ಎಂಬ ಅನುಮಾನ ವ್ಯಕ್ತವಾಗಿದೆ. ಮೆಗಾಸ್ಪೀಡ್ ಕಂಪನಿಯ ವಿರುದ್ಧವೂ ತನಿಖೆ ನಡೆಯುತ್ತಿದೆ. ಸಿಂಗಾಪುರದ ಪೊಲೀಸರು 2025ರಲ್ಲಿ ಆಲಿಸ್ ಹುವಾಂಗ್ ಅವರನ್ನು ವಿಚಾರಣೆ ನಡೆಸಿದ್ದಾರೆ ಎನ್ನಲಾಗಿದೆ.

ಇದೀಗ ಹೊರಗಿನ ಕಾನೂನು ತಜ್ಞರ ನೆರವಿನೊಂದಿಗೆ ಸ್ವತಂತ್ರ ತನಿಖೆ ನಡೆಸಲು ನಿರ್ಧರಿಸಿದೆ. ತನಿಖೆಯ ಮೇಲ್ವಿಚಾರಣೆಯನ್ನು ಸ್ವತಂತ್ರ ನಿರ್ದೇಶಕರ ಸಮಿತಿ ವಹಿಸಲಿದೆ. ಕಂಪನಿಯ ರಹಸ್ಯ ಮಾಹಿತಿ ಅಥವಾ ಅಮೆರಿಕದ ರಾಷ್ಟ್ರೀಯ ಭದ್ರತೆಗೆ ಧಕ್ಕೆಯಾಗಿದೆ ಎಂಬುದಕ್ಕೆ ಸದ್ಯ ಯಾವುದೇ ಸಾಕ್ಷ್ಯವಿಲ್ಲ ಎಂದು ಎನ್ವಿಡಿಯಾ ಸ್ಪಷ್ಟಪಡಿಸಿದೆ. ಇನ್ನೊಂದೆಡೆ, ಜೆನ್ಸನ್ ಹುವಾಂಗ್ ಅವರು ಆಲಿಸ್ ಜತೆಗಿನ ತಮ್ಮ ಭೇಟಿಗಳು ಮೆಗಾಸ್ಪೀಡ್ ಕಂಪನಿಯ ವ್ಯವಹಾರಕ್ಕೆ ಸಂಬಂಧಿಸಿದ್ದವು ಹಾಗೂ ಸಾಮಾನ್ಯ ವಾಣಿಜ್ಯ ಚಟುವಟಿಕೆಗಳ ಭಾಗವಾಗಿದ್ದವು ಎಂದು ಹೇಳಿದ್ದಾರೆ.

ಚೀನಾದಿಂದ ಆರೋಪ ನಿರಾಕರಣೆ

ಚೀನಾ ಸರ್ಕಾರ ಈ ಬೇಹುಗಾರಿಕೆ ಆರೋಪಗಳನ್ನು ತಳ್ಳಿಹಾಕಿದೆ. ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ಗುವೊ ಜಿಯಾಕುನ್, ಯಾವುದೇ ಆಧಾರವಿಲ್ಲದ ಆರೋಪಗಳ ಮೂಲಕ ಚೀನಾದ ವಿರುದ್ಧ ಅಪಪ್ರಚಾರ ಮಾಡಲಾಗುತ್ತಿದೆ ಎಂದು ಪ್ರತಿಕ್ರಿಯಿಸಿದ್ದಾರೆ.

ಇದೇ ವೇಳೆ, ಅಮೆರಿಕದ ಮೂವರು ಪ್ರಮುಖ ರಿಪಬ್ಲಿಕನ್ ಸಂಸದರು ಜೆನ್ಸನ್ ಹುವಾಂಗ್ ಅವರಿಗೆ ಪತ್ರ ಬರೆದು ನವೆಂಬರ್ 18ರಂದು ವಿಚಾರಣೆಗೆ ಹಾಜರಾಗಿ ಮಾಹಿತಿ ನೀಡುವಂತೆ ಕೋರಿದ್ದಾರೆ. ಕಂಪನಿಯ ಸೂಕ್ಷ್ಮ ಮಾಹಿತಿಗಳ ರಕ್ಷಣೆಗೆ ಕೈಗೊಂಡಿರುವ ಕ್ರಮಗಳ ಬಗ್ಗೆಯೂ ವಿವರಣೆ ಕೇಳಿದ್ದಾರೆ.

ಚೀನಾ–ಅಮೆರಿಕ ನಡುವಿನ ತಂತ್ರಜ್ಞಾನ ಪೈಪೋಟಿ ತೀವ್ರಗೊಂಡಿರುವ ಸಂದರ್ಭದಲ್ಲಿ ಈ ವಿವಾದ ಎನ್ವಿಡಿಯಾ ಕಂಪನಿಯ ಮೇಲೆ ಜಾಗತಿಕ ಮಟ್ಟದಲ್ಲಿ ಗಮನ ಸೆಳೆದಿದೆ. ವರದಿಗಳ ಬೆನ್ನಲ್ಲೇ ಕಂಪನಿಯ ಷೇರುಗಳ ಮೇಲೂ ಒತ್ತಡ ಉಂಟಾಗಿದೆ.

ಖರ್ಗೆ ಈದ್ ಹೇಳಿಕೆಗೆ ಬಿಜೆಪಿ ಕಿಡಿ

ನವದೆಹಲಿ, ನ. 9: ಕಾಂಗ್ರೆಸ್ ರಾಷ್ಟ್ರಾಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ದೀಪಾವಳಿ ಹಬ್ಬದ ಶುಭಾಶಯ ಕೋರುವಾಗ ದೀಪಾವಳಿಯು ಸಂತೋಷದ ಈದ್ ಎಂದು ಬಣ್ಣಿಸಿರುವುದು ಇದೀಗ ಭಾರೀ ರಾಜಕೀಯ ಚರ್ಚೆಗೆ ಕಾರಣವಾಗಿದೆ. 2027ರ ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯ ಹೊಸ್ತಿಲಿನಲ್ಲಿ ಈ ಹೇಳಿಕೆಯನ್ನು ಅಸ್ತ್ರವಾಗಿಸಿಕೊಂಡಿರುವ ಬಿಜೆಪಿ, ಕಾಂಗ್ರೆಸ್ ವಿರುದ್ಧ ಮತಬ್ಯಾಂಕ್ ಹಾಗೂ ತುಷ್ಟೀಕರಣ ರಾಜಕಾರಣದ ಆರೋಪ ಹೊರಿಸಿದೆ.

ನ.7 ರಂದು ಮಾಧ್ಯಮಗಳೊಂದಿಗೆ ಮಾತನಾಡಿದ್ದ ಮಲ್ಲಿಕಾರ್ಜುನ ಖರ್ಗೆ, ದೇಶದ ಜನತೆಗೆ ದೀಪಾವಳಿ ಶುಭಾಶಯ ಕೋರಿದ್ದರು. ನಾನು ಪ್ರತಿಯೊಬ್ಬರಿಗೂ ದೀಪಾವಳಿಯ ಶುಭಾಶಯಗಳನ್ನು ಕೋರುತ್ತೇನೆ. ಅನೇಕ ಜನರು ಇದನ್ನು ಸಂತೋಷದ ಈದ್ ಎಂದು ಆಚರಿಸುತ್ತಾರೆ, ಎಂದು ಹೇಳಿದ್ದರು.

ಅಲ್ಲದೆ, ಮನಸ್ತಾಪಗಳು ಅಥವಾ ಭಿನ್ನಾಭಿಪ್ರಾಯಗಳಿದ್ದರೂ ಅದನ್ನು ಬದಿಗಿಟ್ಟು, ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರದ ಐಕ್ಯತೆಯನ್ನು ಬಲಪಡಿಸಲು ಎಲ್ಲರೂ ಒಟ್ಟಾಗಿ ಶ್ರಮಿಸಬೇಕು ಎಂದು ಅವರು ಮನವಿ ಮಾಡಿದ್ದರು.

ಖರ್ಗೆ ಅವರ ಈ ಹೇಳಿಕೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿ, ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ವಿಡಿಯೋ ಹಂಚಿಕೊಂಡಿರುವ ಬಿಜೆಪಿ ವಕ್ತಾರ ಪ್ರದೀಪ್ ಭಂಡಾರಿ, ಕಾಂಗ್ರೆಸ್ ಸನಾತನ ಧರ್ಮ ಮತ್ತು ಹಿಂದು ವಿರೋಧಿ ನೀತಿಯನ್ನು ಅನುಸರಿಸುತ್ತಿದೆ. ಖರ್ಗೆ ಅವರ ಪದ ಬಳಕೆ ನಿರ್ದಿಷ್ಟ ಮತಬ್ಯಾಂಕ್ ಓಲೈಸುವ ಉದ್ದೇಶದಿಂದ ಕೂಡಿದೆ, ಎಂದು ವಾಗ್ದಾಳಿ ನಡೆಸಿದ್ದಾರೆ.

ಇದೇ ವೇಳೆ ಭಂಡಾರಿ, ಬಟ್ಲಾ ಹೌಸ್ ಎನ್‌ಕೌಂಟರ್ ವಿಚಾರದಲ್ಲಿ ಸೋನಿಯಾ ಗಾಂಧಿ ಅವರ ನಿಲುವು, ಬಾಬರಿ ಮಸೀದಿ ವಿವಾದ ಹಾಗೂ ಅಯೋಧ್ಯೆಯ ರಾಮಮಂದಿರಕ್ಕೆ ಕಾಂಗ್ರೆಸ್ ನಾಯಕರು ಭೇಟಿ ನೀಡದಿರುವುದನ್ನು ಪ್ರಸ್ತಾಪಿಸಿದ್ದಾರೆ. ಡಿಎಂಕೆ ನಾಯಕ ಉದಯನಿಧಿ ಸ್ಟಾಲಿನ್ ಸನಾತನ ಧರ್ಮವನ್ನು ಡೆಂಗ್ಯೂ ಮತ್ತು ಮಲೇರಿಯಾಗೆ ಹೋಲಿಸಿದಾಗಲೂ ಕಾಂಗ್ರೆಸ್ ಮೌನವಾಗಿತ್ತು ಎಂದು ಆರೋಪ ಮಾಡಿದ್ದಾರೆ.

ಕಾಂಗ್ರೆಸ್ ನಾಯಕರು ಖರ್ಗೆ ಅವರ ಮಾತುಗಳನ್ನು ಸಮರ್ಥಿಸಿಕೊಂಡಿದ್ದು, ಈದ್ ಎಂಬ ಪದ ಕೇವಲ ಒಂದು ಧರ್ಮಕ್ಕೆ ಸೀಮಿತವಾದದ್ದಲ್ಲ, ಬದಲಿಗೆ ಭಾಷಿಕವಾಗಿ ಅದು ಸಂತೋಷ, ಉತ್ಸವ ಹಾಗೂ ಸಂಭ್ರಮ ಎಂಬ ಅರ್ಥವನ್ನು ನೀಡುತ್ತದೆ ಎಂದು ಸ್ಪಷ್ಟಪಡಿಸಿದ್ದಾರೆ. ಬಿಜೆಪಿಯ ಆರೋಪಗಳನ್ನು ತಿರಸ್ಕರಿಸಿದ ಕಾಂಗ್ರೆಸ್, ಬಿಜೆಪಿ ನಾಯಕರು ಪ್ರತಿಯೊಂದು ಸಾಂಸ್ಕೃತಿಕ ಅಥವಾ ಸೌಹಾರ್ದದ ಹೇಳಿಕೆಯಲ್ಲೂ ಧಾರ್ಮಿಕ ಧ್ರುವೀಕರಣ ಮತ್ತು ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಯತ್ನಿಸುತ್ತಾರೆ ಎಂದು ಪ್ರತ್ಯಾರೋಪ ಮಾಡಿದೆ.

ಬಿಜೆಪಿಯು ಉತ್ತರ ಪ್ರದೇಶ ಚುನಾವಣೆ ಮತ್ತು ದೇಶದ ಮೂಲಭೂತ ಸಮಸ್ಯೆಗಳಿಂದ ಜನರ ಗಮನವನ್ನು ಬೇರೆಡೆ ಸೆಳೆಯಲು ಈ ರೀತಿಯ ವಿವಾದಗಳನ್ನು ಸೃಷ್ಟಿಸುತ್ತಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಯೆಮೆನ್‌ನಲ್ಲಿ ಸಿಲುಕಿದ್ದ 19 ಭಾರತೀಯ ನಾವಿಕರ ತೆರವು



ನವದೆಹಲಿ, ನ. 9: ಕಳೆದ ಎರಡು ವಾರಗಳಿಂದ ಯೆಮೆನ್ ದೇಶದ ಹೊದೈದಾ ಮತ್ತು ಸನಾ ನಗರಗಳಲ್ಲಿ ಸಿಲುಕಿಕೊಂಡಿದ್ದ 19 ಮಂದಿ ಭಾರತೀಯ ನಾವಿಕರನ್ನು ಇದೀಗ ಯಶಸ್ವಿಯಾಗಿ ಹಾಗೂ ಸುರಕ್ಷಿತವಾಗಿ ತೆರವುಗೊಳಿಸಲಾಗಿದೆ. ದುಬೈನಿಂದ ಬಂದ ವರದಿಗಳ ಪ್ರಕಾರ, ಈ ಎಲ್ಲಾ ನಾವಿಕರು ಯಾವುದೇ ಅಪಾಯವಿಲ್ಲದೆ ತಮ್ಮ ತಾಯ್ನಾಡಿನತ್ತ ಮರಳಿ ಪ್ರಯಾಣ ಬೆಳೆಸಿದ್ದಾರೆ ಎಂದು ಯೆಮೆನ್‌ನ ಭಾರತೀಯ ರಾಯಭಾರ ಕಚೇರಿ ತಿಳಿಸಿದೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್ ಖಾತೆಯಲ್ಲಿ ಅಧಿಕೃತ ಮಾಹಿತಿ ಹಂಚಿಕೊಂಡಿರುವ ರಾಯಭಾರ ಕಚೇರಿ, ಎಲ್ಲಾ ನಾವಿಕರು ಸಂಪೂರ್ಣ ಸುರಕ್ಷಿತವಾಗಿದ್ದಾರೆ ಮತ್ತು ಉತ್ತಮ ಆರೋಗ್ಯದಿಂದಿದ್ದಾರೆ. ಅವರೆಲ್ಲರೂ ಭಾರತದತ್ತ ಮರಳುತ್ತಿದ್ದಾರೆ. ನಮ್ಮ ಭಾರತೀಯ ಪ್ರಜೆಗಳನ್ನು ಅತ್ಯಂತ ಸುರಕ್ಷಿತವಾಗಿ ಸ್ಥಳಾಂತರಿಸುವ ಮಹತ್ವದ ಕಾರ್ಯಾಚರಣೆಗೆ ಬೆಂಬಲ ನೀಡಿದ ಹಾಗೂ ನಿರಂತರವಾಗಿ ಸಹಕರಿಸಿದ ಎಲ್ಲರಿಗೂ ಪ್ರಾಮಾಣಿಕ ಕೃತಜ್ಞತೆಗಳು ಎಂದು ಪೋಸ್ಟ್ ಮಾಡಿದೆ.

ಯೆಮೆನ್ ಕರಾವಳಿ ತೀರದ ಸಮೀಪ ಸಂಭವಿಸಿದ ಘಟನೆಯೊಂದರಲ್ಲಿ ವಿಹಾರ ನೌಕೆಯಲ್ಲಿ (ಯಾಟ್) ಪ್ರಯಾಣಿಸುತ್ತಿದ್ದ 14 ಮಂದಿ ಭಾರತೀಯ ಪ್ರಜೆಗಳು ಸುರಕ್ಷಿತವಾಗಿದ್ದಾರೆ ಎಂದು ಭಾರತ ಸರ್ಕಾರವು ಕೇವಲ ಕೆಲವೇ ದಿನಗಳ ಹಿಂದೆಯಷ್ಟೇ ಮಾಹಿತಿ ನೀಡಿತ್ತು. ಆ ಹೇಳಿಕೆ ಹೊರಬಿದ್ದ ಬೆನ್ನಲ್ಲೇ ಇದೀಗ ಈ 19 ನಾವಿಕರ ಯಶಸ್ವಿ ತೆರವು ಕಾರ್ಯಾಚರಣೆ ನಡೆದಿದೆ ಎಂಬುದು ಗಮನಾರ್ಹ ಸಂಗತಿಯಾಗಿದೆ.

ಆದರೆ, ಪ್ರಸ್ತುತ ರಕ್ಷಣೆ ಮಾಡಲಾಗಿರುವ ಈ 19 ಮಂದಿ ನಾವಿಕರಲ್ಲಿ, ಈ ಹಿಂದೆ ವಿಹಾರ ನೌಕೆಯಲ್ಲಿದ್ದರು ಎಂದು ಉಲ್ಲೇಖಿಸಲಾಗಿದ್ದ ಆ 14 ಮಂದಿ ಭಾರತೀಯರು ಸೇರಿದ್ದಾರೆಯೇ ಅಥವಾ ಇಲ್ಲವೇ ಎಂಬುದು ತಕ್ಷಣಕ್ಕೆ ಸ್ಪಷ್ಟವಾಗಿಲ್ಲ. ಅಕ್ಟೋಬರ್ 23 ರಂದು ಪ್ರತಿಕ್ರಿಯಿಸಿದ್ದ ಭಾರತೀಯ ರಾಯಭಾರ ಕಚೇರಿಯು, ಹೊದೈದಾ ಬಳಿ ನೌಕೆಯಲ್ಲಿದ್ದ 14 ಭಾರತೀಯರು ಸುರಕ್ಷಿತವಾಗಿದ್ದಾರೆ ಮತ್ತು ಘಟನೆಯ ನಿಖರ ಮಾಹಿತಿ ಕಲೆಹಾಕಲು ಸಂಬಂಧಪಟ್ಟವರೊಂದಿಗೆ ಸಂಪರ್ಕದಲ್ಲಿರುವುದಾಗಿ ತಿಳಿಸಿತ್ತು.

ಕೆಂಪು ಸಮುದ್ರದ (ರೆಡ್ ಸೀ) ಯುಕಾರ್ ದ್ವೀಪದ ಬಳಿ ಇದ್ದ ಭಾರತೀಯ ವಿಹಾರ ನೌಕೆಯ ಮೇಲೆ ಸೌದಿ ಅರೇಬಿಯಾ ಪಡೆಗಳು ದಾಳಿ ನಡೆಸಿದ್ದವು ಎಂದು ಯೆಮೆನ್ ಮೂಲದ ಹೌತಿ ಬಂಡುಕೋರ ಗುಂಪಿನ ವಕ್ತಾರ ಯಾಹ್ಯಾ ಸರಿ ಆರೋಪಿಸಿದ್ದರು. ಅಲ್ಲದೆ, ಆ ನೌಕೆಯಲ್ಲಿದ್ದ 14 ಭಾರತೀಯರನ್ನು ತಮ್ಮ ಪಡೆಗಳು ರಕ್ಷಿಸುತ್ತಿವೆ ಎಂದು ಅವರು ನೀಡಿದ್ದ ಹೇಳಿಕೆಯನ್ನು ಕೆಲವು ಅರಬ್ ಮಾಧ್ಯಮಗಳು ಈ ಹಿಂದೆ ವರದಿ ಮಾಡಿದ್ದವು.

ಸೌದಿ ಅರೇಬಿಯಾ ಮತ್ತು ಯೆಮೆನ್ನ ಹೂತಿ ಬಂಡುಕೋರರ ನಡುವೆ ಇತ್ತೀಚಿನ ದಿನಗಳಲ್ಲಿ ಪರಸ್ಪರ ದಾಳಿ ಮತ್ತು ಪ್ರತಿದಾಳಿಗಳು ಹೆಚ್ಚಾಗಿದ್ದು, ಸಂಘರ್ಷ ತೀವ್ರಗೊಂಡಿರುವ ಬಿಕ್ಕಟ್ಟಿನ ನಡುವೆಯೇ ಈ ಘಟನೆ ನಡೆದಿದೆ. ಹೌತಿಗಳ ಕ್ಷಿಪಣಿ ಮತ್ತು ಡ್ರೋನ್‌ಗಳನ್ನು ಸೌದಿ ಅರೇಬಿಯಾ ಯಶಸ್ವಿಯಾಗಿ ತಡೆದಿದ್ದರೆ, ಸೌದಿ ನೇತೃತ್ವದ ಮೈತ್ರಿ ಪಡೆಗಳು ಯೆಮೆನ್ ಮೇಲೆ ತೀವ್ರವಾದ ವೈಮಾನಿಕ ದಾಳಿಗಳನ್ನು ನಡೆಸಿವೆ.

ಈ ಇತ್ತೀಚಿನ ಹಿಂಸಾಚಾರವು ಕೇವಲ ಸೇನಾ ನೆಲೆಗಳನ್ನಷ್ಟೇ ಅಲ್ಲದೆ, ನಾಗರಿಕ ಮತ್ತು ಇಂಧನ ಮೂಲಸೌಕರ್ಯಗಳ ಮೇಲೂ ಗಂಭೀರ ಪರಿಣಾಮ ಬೀರಿದೆ. ಇದು ಜಾಗತಿಕ ಮಟ್ಟದ ಪ್ರಮುಖ ಅಂತರರಾಷ್ಟ್ರೀಯ ಹಡಗು ಮಾರ್ಗವಾಗಿರುವ ಕೆಂಪು ಸಮುದ್ರ ಹಾಗೂ ಬಾಬ್ ಅಲ್–ಮಂಡೇಬ್ ಜಲಸಂಧಿಯಲ್ಲಿನ ಒಟ್ಟಾರೆ ಭದ್ರತೆಯ ಬಗ್ಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ತೀವ್ರ ಆತಂಕಕ್ಕೆ ಕಾರಣವಾಗಿದೆ.

ಭಾರತ–ನ್ಯೂಜಿಲೆಂಡ್ 3ನೇ ಏಕದಿನ ಪಂದ್ಯಕ್ಕೂ ಮಳೆ ಭೀತಿ

ಹ್ಯಾಮಿಲ್ಟನ್, ನ. 9: ನ್ಯೂಜಿಲೆಂಡ್ ವಿರುದ್ಧದ ಮೊದಲ 2 ಏಕದಿನ ಪಂದ್ಯಗಳಲ್ಲಿ ಭಾರತ ತಂಡ ಮಳೆ ನಡುವೆಯೂ ಗೆಲುವು ದಾಖಲಿಸುವಲ್ಲಿ ಯಶಸ್ವಿಯಾಗಿತ್ತು. ಇದೀಗ ಸರಣಿಯ ಮೂರನೇ ಏಕದಿನ ಪಂದ್ಯಕ್ಕೂ ಮಳೆ ಭೀತಿ ಶುರುವಾಗಿದ್ದೇ. ಮೂರನೇ ಏಕದಿನ ಪಂದ್ಯ ಮಂಗಳವಾರ ಹ್ಯಾಮಿಲ್ಟನ್‌ನ ಸೆಡನ್ ಪಾರ್ಕ್ ಮೈದಾನದಲ್ಲಿ ನಿಗದಿಯಾಗಿದ್ದು, ಈ ಪಂದ್ಯ ಗೆದ್ದುಕೊಂಡರೆ ಸರಣಿ ವಶಪಡಿಸಿಕೊಳ್ಳುವ ಅವಕಾಶ ಶುಭಮನ್ ಗಿಲ್ ಬಳಗದ ಮುಂದಿದೆ. ಆದರೆ ಭಾನುವಾರ ಭಾರತ ತಂಡ ಇಲ್ಲಿಗೆ ಆಗಮಿಸಿದಾಗಲೇ ಮಳೆಯ ಸ್ವಾಗತ ದೊರೆತಿದ್ದು, ಸೋಮವಾರ ಮತ್ತು ಭಾನುವಾರ ಇಲ್ಲಿ ಮತ್ತಷ್ಟು ಮಳೆಯಾಗುವ ಸಾಧ್ಯತೆ ಇದೆ ಎನ್ನಲಾಗಿದೆ.

ಸಾಮಾನ್ಯವಾಗಿ ನ್ಯೂಜಿಲೆಂಡ್ನಲ್ಲಿ ನವೆಂಬರ್ನಲ್ಲಿ ಮಳೆಯಾಗುವುದಿಲ್ಲ. ಆದರೆ ಈ ಬಾರಿ ನವೆಂಬರ್ ಆರಂಭದಿಂದಲೂ ನ್ಯೂಜಿಲೆಂಡ್‌ನಲ್ಲಿ ಮಳೆಯಾಗುತ್ತಿದೆ. ಇದರಿಂದ ತಂಪಾದ ವಾತಾವರಣ ಇರುವುದರಿಂದಲೇ ಸರಣಿಯ ಮೊದಲ 2 ಪಂದ್ಯಗಳ ವೇಳೆಯೂ ಪಿಚ್ ಬೌಲರ್‌ಗಳಿಗೆ ಹೆಚ್ಚಿನ ಸಹಕಾರ ನೀಡಿದೆ. ಆತಿಥೇಯ ನ್ಯೂಜಿಲೆಂಡ್ ತಂಡವೇ ಮೊದಲ 2 ಏಕದಿನಗಳಲ್ಲೂ ಸಂಪೂರ್ಣ 50 ಓವರ್ ಬ್ಯಾಟಿಂಗ್ ಮಾಡಲು ಶಕ್ತವಾಗಿರಲಿಲ್ಲ. ಇದೇ ಮೈದಾನಗಳಲ್ಲಿ ಆಡಿದ ಟಿ20 ಪಂದ್ಯಗಳಲ್ಲಿ ರನ್‌ಗಳ ಪ್ರವಾಹ ಹರಿದಿತ್ತು ಎಂಬುದು ಗಮನಾರ್ಹ.ಅಕಾಲಿಕ ಮಳೆಯಿಂದಾಗಿ ಹ್ಯಾಮಿಲ್ಟನ್‌ನಲ್ಲಿ ಪಂದ್ಯಕ್ಕೆ ಪಿಚ್ ಸಿದ್ಧಪಡಿಸಲು ಕೂಡ ತೊಂದರೆಯಾಗಿದೆ



ಎಂದು ಸೆಡನ್ ಪಾರ್ಕ್‌ನ ಪಿಚ್ ಕ್ಯುರೇಟರ್ ಕರ್ಲ್ ಜಾನ್ಸನ್ ತಿಳಿಸಿದ್ದಾರೆ. ಆದರೆ ಮಳೆ ಬಂದರೂ ಮೈದಾನವನ್ನು ಬೇಗನೆ ಪಂದ್ಯಕ್ಕೆ ಸಜ್ಜುಗೊಳಿಸಬಹುದಾದ ಒಳಚರಂಡಿ ವ್ಯವಸ್ಥೆ ಇದೆ ಎಂದು ಅವರು ಭರವಸೆ ವ್ಯಕ್ತಪಡಿಸಿದ್ದಾರೆ. ಭಾರತ ತಂಡ ಈ ವರ್ಷ ಎಲ್ಲ ಮಾದರಿಯ ಕ್ರಿಕೆಟ್ ಸೇರಿ ನ್ಯೂಜಿಲೆಂಡ್ ವಿರುದ್ಧ ಒಟ್ಟಾರೆ 11 ಗೆಲುವು ದಾಖಲಿಸಿದೆ. ಈ ಮೂಲಕ ರಿಕಿ ಪಾಂಟಿಂಗ್ ಸಾರಥ್ಯದ ಆಸ್ಟ್ರೇಲಿಯಾ ತಂಡ 2005ರಲ್ಲಿ ನ್ಯೂಜಿಲೆಂಡ್ ವಿರುದ್ಧ ಒಟ್ಟು 10 ಗೆಲುವು ಸಾಧಿಸಿದ್ದ ದಾಖಲೆಯನ್ನು ಭಾರತ ಮುರಿದಿದೆ. ಆಸ್ಟ್ರೇಲಿಯಾ 21 ವರ್ಷಗಳ ಹಿಂದೆ 12 ಪಂದ್ಯಗಳಲ್ಲೇ 10 ಗೆಲುವು (ಟಿ20ಯಲ್ಲಿ 1, ಏಕದಿನದಲ್ಲಿ 7, ಟೆಸ್ಟ್‌ನಲ್ಲಿ 2) ಸಾಧಿಸಿದ್ದರೆ, ಭಾರತ ತಂಡ 16 ಪಂದ್ಯಗಳಲ್ಲಿ 11 ಗೆಲುವು ಸಾಧಿಸಿದೆ. ಭಾರತ ಹಾಲಿ ವರ್ಷ ಕಿವೀಸ್ ವಿರುದ್ಧ ಆಡಿದ 11 ಟಿ20 ಪಂದ್ಯಗಳಲ್ಲಿ 8 ಗೆಲುವು ಸಾಧಿಸಿದ್ದರೆ, ಏಕದಿನದಲ್ಲಿ 5ರಲ್ಲಿ 3 ಗೆಲುವು ಸಾಧಿಸಿದೆ.

ಭಾರತದ ವಿರುದ್ಧ ಅಪಪ್ರಚಾರದ ಶಂಕೆ

ನವದೆಹಲಿ,ನ.9: ಬಾಂಗ್ಲಾದೇಶದ ರಾಜಧಾನಿ ಢಾಕಾದ ಕೆಲ ಕೊಳಚೆ ಪ್ರದೇಶಗಳ ದೃಶ್ಯಗಳನ್ನು ಭಾರತದ ರಾಜಧಾನಿ ನವದೆಹಲಿಯ ದೃಶ್ಯಗಳೆಂದು ಬಿಂಬಿಸಿ ಚೀನಿ ಪ್ರಜೆಗಳು ಸಾಮಾಜಿಕ ಜಾಲತಾಣಗಳಲ್ಲಿ ನೇರ ಪ್ರಸಾರ ಮಾಡುತ್ತಿರುವ ಪ್ರಕರಣ ಬೆಳಕಿಗೆ ಬಂದಿದೆ. ಈ ಮೂಲಕ ಚೀನಿ ವೀಕ್ಷಕರಲ್ಲಿ ಭಾರತದ ಬಗ್ಗೆ ನಕಾರಾತ್ಮಕ ಚಿತ್ರಣ ಮೂಡಿಸುವ ಪ್ರಯತ್ನ ನಡೆಯುತ್ತಿದೆಯೇ ಎಂಬ ಅನುಮಾನ ವ್ಯಕ್ತವಾಗಿದೆ.

ಢಾಕಾದಲ್ಲಿ ಸುಮಾರು 150 ಚೀನಿ ಪ್ರಜೆಗಳು ವಿವಿಧ ಪ್ರದೇಶಗಳಲ್ಲಿ ವಿಡಿಯೋ ಚಿತ್ರೀಕರಣ ಮತ್ತು ನೇರ ಪ್ರಸಾರದಲ್ಲಿ ತೊಡಗಿದ್ದಾರೆ ಎಂದು ಬಾಂಗ್ಲಾದೇಶದ 'ಪ್ರಥಮ್ ಆಲೋ' ಪತ್ರಿಕೆ ನಡೆಸಿದ ತನಿಖಾ ವರದಿ ತಿಳಿಸಿದೆ. ಢಾಕಾದ ಟೆಕ್ವಾರಾ ಮತ್ತು ಉತ್ತರಾ ಪ್ರದೇಶಗಳ ಕಿರಿದಾದ ಬೀದಿಗಳು, ಬಡಾವಣೆಗಳು ಹಾಗೂ ಅಲ್ಲಿನ ಜನರ ಜೀವನಶೈಲಿಯನ್ನು ಚಿತ್ರೀಕರಿಸಿ, ಅವುಗಳನ್ನು ನವದೆಹಲಿಯ ದೃಶ್ಯಗಳೆಂದು ಚೀನಾದ ಸಾಮಾಜಿಕ ಜಾಲತಾಣಗಳಲ್ಲಿ ಪ್ರಸಾರ ಮಾಡಲಾಗುತ್ತಿದೆ. ಈ ವೇಳೆ ಭಾರತದ ಜನರ ಜೀವನಮಟ್ಟ, ಸ್ವಚ್ಛತೆ ಮತ್ತು ಕಾನೂನು ಸುವ್ಯವಸ್ಥೆ ಕುರಿತು ಅವಹೇಳನಕಾರಿ ಹೇಳಿಕೆಗಳನ್ನು ನೀಡಲಾಗುತ್ತಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

'ಮಿಯಾನ್‌ಮಿಯಾನ್' ಎಂಬ ಚೀನಿ ಮಹಿಳೆಯೊಬ್ಬರು ಉತ್ತರಾ ಪ್ರದೇಶದ ಸೆಕ್ಟರ್ 12ರಲ್ಲಿ ನೇರ ಪ್ರಸಾರ ಮಾಡುವಾಗ ಅದನ್ನು ನವದೆಹಲಿ ಎಂದು ಪರಿಚಯಿಸಿದ್ದಾರೆ. ಅಲ್ಲಿನ ಮನೆಗಳು ಕೊಳಕಾಗಿವೆ, ಟಿನ್ ಶೆಡ್‌ಗಳ ಮನೆಗಳಲ್ಲಿ ಫ್ಯಾನ್‌ಗಳೂ ಇಲ್ಲ, ಪ್ರದೇಶ ಅತ್ಯಂತ ಹಿಂದುಳಿದಿದೆ ಹಾಗೂ ಸ್ವಚ್ಛತೆಯಿಲ್ಲ ಎಂದು ಹೇಳಿರುವುದಾಗಿ ವರದಿಯಾಗಿದೆ.

ಇದೇ ರೀತಿ ಟೆಕ್ವಾರಾದ ಚಹಾ ಅಂಗಡಿಗಳಲ್ಲಿ ಚಿತ್ರೀಕರಣ ನಡೆಸುತ್ತಿದ್ದ 'ವಾಂಗ್ ವೇಯ್' ಎಂಬ ಚೀನಿ ಪ್ರಜೆಯೊಬ್ಬರು ಸ್ಥಳೀಯರು ಕುಡಿಯುವ ಚಹಾವನ್ನು ಗೋಮೂತ್ರದಿಂದ ತಯಾರಿಸಲಾಗಿದೆ ಎಂದು ಆಕ್ಷೇಪಾರ್ಹ ಹೇಳಿಕೆ ನೀಡಿದ್ದಾರೆ ಎನ್ನಲಾಗಿದೆ.


ಮಧ್ಯಪ್ರದೇಶ, ಮಹಾರಾಷ್ಟ್ರದಲ್ಲಿ ಭೀಕರ ಅಗ್ನಿ ದುರಂತ: 18 ಮಂದಿ ಸಾವು

ಭೋಪಾಲ್/ಮುಂಬೈ,ನ.9: ದೀಪಾವಳಿ ಹಬ್ಬದ ರಾತ್ರಿ ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರದಲ್ಲಿ ಸಂಭವಿಸಿದ ಮೂರು ಪ್ರತ್ಯೇಕ ಅಗ್ನಿ ಅವಘಡಗಳಲ್ಲಿ ಆರು ಮಕ್ಕಳೂ ಸೇರಿದಂತೆ ಒಟ್ಟು 18 ಮಂದಿ ಮೃತಪಟ್ಟಿದ್ದಾರೆ. ಮಧ್ಯಪ್ರದೇಶದ ಸಿಯೋನಿ ಜಿಲ್ಲೆಯ ಛಪಾರಾದ ಮಹಾವೀರ್ ವಾರ್ಡ್ನ ಜೈನ್ ಮೊಹಲ್ಲಾದಲ್ಲಿ ಆಭರಣ ವ್ಯಾಪಾರಿ ಕುಂದನ್ ಸೋನಿ ಅವರ ಮೂರು ಅಂತಸ್ತಿನ ಮನೆಯಲ್ಲಿ ರಾತ್ರಿ ಸುಮಾರು 3 ಗಂಟೆಗೆ ಬೆಂಕಿ ಕಾಣಿಸಿಕೊಂಡಿದೆ. ಮನೆಯಲ್ಲಿದ್ದವರು ನಿದ್ರಿಸುತ್ತಿದ್ದ ವೇಳೆ ಬೆಂಕಿ ವ್ಯಾಪಿಸಿದ್ದು, ಕುಟುಂಬದ ಆರು ಮಂದಿ ಸಜೀವ ದಹನವಾಗಿದ್ದಾರೆ.

ಮೃತರಲ್ಲಿ ನಾಲ್ವರು ಮಹಿಳೆಯರು ಹಾಗೂ ಇಬ್ಬರು ಪುರುಷರು ಸೇರಿದ್ದಾರೆ. ಮನೆಯಲ್ಲಿ ಒಟ್ಟು 10 ಮಂದಿ ಇದ್ದು, ನಾಲ್ವರನ್ನು ಸುರಕ್ಷಿತವಾಗಿ ಹೊರತರಲಾಗಿದೆ. ಗಾಯಗೊಂಡವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಬೆಂಕಿ ಅವಘಡಕ್ಕೆ ನಿಖರ ಕಾರಣ ತಿಳಿದುಬಂದಿಲ್ಲ.

ಮಧ್ಯಪ್ರದೇಶದ ಕಟ್ನಿ ಜಿಲ್ಲೆಯ ಬರಹಿ ಪಟ್ಟಣದಲ್ಲೂ ಭೀಕರ ಅಗ್ನಿ ಅವಘಡ ಸಂಭವಿಸಿದೆ. ದೀಪಾವಳಿ ಪೂಜೆಯ ಬಳಿಕ ರಾತ್ರಿ ಸುಮಾರು 11.30ಕ್ಕೆ ಪೂರಣ್ ಅಗರವಾಲ್ ಮತ್ತು ರಿತೇಶ್ ಅಗರವಾಲ್ ಅವರಿಗೆ ಸೇರಿದ ಪಾತ್ರೆ ಅಂಗಡಿಯಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಅಂಗಡಿಯ ಮೇಲಿದ್ದ ಮೂರು ಅಂತಸ್ತಿನ ಕಟ್ಟಡಕ್ಕೂ ಬೆಂಕಿ ವ್ಯಾಪಿಸಿದೆ. ಕಟ್ಟಡದಲ್ಲಿ ಮಲಗಿದ್ದ ಅಗರವಾಲ್ ಕುಟುಂಬದ ಆರು ಮಂದಿ ಹೊರಬರಲಾಗದೆ ಮೃತಪಟ್ಟಿದ್ದಾರೆ.

ಮೃತರಲ್ಲಿ ಇಬ್ಬರು ವೃದ್ಧರು, ಒಬ್ಬ ಮಹಿಳೆ ಹಾಗೂ ಮೂವರು ಮಕ್ಕಳು ಸೇರಿದ್ದಾರೆ. ಓರ್ವ ಪುರುಷ ಮತ್ತು ಮಹಿಳೆ ಅಪಾಯದಿಂದ ಪಾರಾಗಿದ್ದಾರೆ. ಇನ್ನು ಮಹಾರಾಷ್ಟ್ರದ ಧಾರಾಶಿವ ಜಿಲ್ಲೆಯ ಯೇಡ್ಷಿ ಗ್ರಾಮದಲ್ಲೂ ಅಗ್ನಿ ದುರಂತ ಸಂಭವಿಸಿದೆ. ಗೋವಿಂದ ಕರಾಂಡೆ ಅವರಿಗೆ ಸೇರಿದ ಕಿರಾಣಿ ಅಂಗಡಿಯ ಮೇಲಿನ ಮಹಡಿಯಲ್ಲಿ ಕುಟುಂಬ ವಾಸವಿತ್ತು. ರಾತ್ರಿ ಸುಮಾರು 2.30ಕ್ಕೆ ಮನೆಯಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಕ್ಷಣಾರ್ಧದಲ್ಲಿ ಬೆಂಕಿ ಹಾಗೂ ಹೊಗೆ ಇಡೀ ಮನೆಗೆ ವ್ಯಾಪಿಸಿದೆ. ಉಸಿರುಗಟ್ಟಿ ಮತ್ತು ಸುಟ್ಟ ಗಾಯಗಳಿಂದ ಒಂದೇ ಕುಟುಂಬದ ಆರು ಮಂದಿ ಮೃತಪಟ್ಟಿದ್ದಾರೆ. ಕುಟುಂಬದ ಓರ್ವ ಸದಸ್ಯರು ಮಾತ್ರ ಬದುಕುಳಿದಿದ್ದಾರೆ.


HAPPY 100TH
YEAR BIRTHDAY to
former deputy prime
minister of india,
BJP BHISHMA
SRI L K ADVANIJI
M D LAKSMINARAYANA
EX MLA
TURUVEKERE CONSTITUENCY
TUMKUR DISTRICT
N. LAKSMIKANTHA
Former Corporater
Karisandra ward,
padmanabhanagar
constituency, Bangalore
R ASHOK
Opposition Party Leader
Karnataka Assembly